ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಜೂನ್ 13, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 30 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
08192 254736 91642 99999

THE TEAM ACADEMY
Davangere & Shivamogga
LONG TERM FOR NEET & IIT - 2024
CLASSES STARTS FROM 15TH JUNE 2023
2022 ನೇ ಸಾಲಿನ NEET ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ..!
DAVANGERE DIST 1ST IN KVPY 2022 AIR - 820
655/720 SOURAV P MUDADEVANNANAVAR
640/720 SURYAVARDHAN H PATIL
NEET 2022 TOPPERS
627/720 ABHISHEAK M ADMANI
615/720 AJAY KUMAR P G
615/720 PAVAN B B
605/720 VARUN BYADAGI
For Davangere : 9035109411, 9538546758 For Shivamogga : 9902303441, 9963505593

## ನೀರಿನ ಸಮಸ್ಯೆಯಾದರೆ ಸಿಇಒಗಳೇ ಹೊಣೆ



ಬೆಂಗಳೂರು ಜೂ.12 - ರಾಜ್ಯದ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯಾದರೆ ಸಂಬಂಧಪಟ್ಟ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಹೊಣೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ವಾಡಿಕೆ ಮಳೆಗಿಂತ ಶೇ.67ರಷ್ಟು ಕೊರತೆಯಾಗಿರುವ ರಾಜ್ಯದ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ.

ಸಮಸ್ಯೆಯನ್ನು ಅರಿತ ಮುಖ್ಯಮಂತ್ರಿ ಅವರು, ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಡಳಿತಗಳೊಂದಿಗೆ ವಿಡಿಯೋ ಸಂವಾದ ನಡೆಸಿ, ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಿ ಎಂದು ಸೂಚನೆ ನೀಡಿದರು. ಜಿಲ್ಲಾಡಳಿತ ಉಸ್ತುವಾರಿ ಸಚಿವರೊಂದಿಗೆ (4ನೇ ಪುಟಕ್ಕೆ)

## ಗ್ಯಾರಂಟಿಗಾಗಿ ಬಜೆಟ್ ಗಾತ್ರ ಹೆಚ್ಚಳಕ್ಕೆ ಚಿಂತನೆ

ಬೆಂಗಳೂರು ಜೂ.12 - ಅಧಿಕಾರಕ್ಕೆ ಬಂದ ಕೂಡಲೇ ರಾಜ್ಯದ ಜನರಿಗೆ 5 ಗ್ಯಾರಂಟಿಗಳಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಬಜೆಟ್ ಗಾತ್ರವನ್ನು 3.40 ಲಕ್ಷ ಕೋಟಿ ರೂಪಾಯಿಗೆ ಹೆಚ್ಚಿಸಲು ಮುಂದಾಗಿದ್ದಾರೆ.

ಫೆಬ್ರವರಿಯಲ್ಲಿ ಮಂಡನೆಯಾದ 2023-24 ನೇ ಸಾಲಿನ ಬಜೆಟ್ 3.09 ಲಕ್ಷ ಕೋಟಿ ರೂಪಾಯಿ ಗಾತ್ರವನ್ನು ಹೊಂದಿದೆ. ಈ ಗಾತ್ರವನ್ನು ಮೂವತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚಿಸಲು ಬಯಸಿದ್ದಾರೆ.

ಜುಲೈ 7 ರಂದು ರಾಜ್ಯ ವಿಧಾನಸಭೆಯಲ್ಲಿ ಪ್ರಸಕ್ತ ಸಾಲಿನ ಬಜೆಟ್ಟನ್ನು ಮತ್ತೆ ಮಂಡಿಸಲಿರುವ ಮುಖ್ಯಮಂತ್ರಿ ಗ್ಯಾರಂಟಿಗಳಿಗೆ ಬೇಕಾದ ಹೆಚ್ಚುವರಿ ಹಣವನ್ನು ಹೊಂದಿಸಲು ವಿವಿಧ ಮಾರ್ಗೋಪಾಯಗಳನ್ನು ಹುಡುಕತೊಡಗಿದ್ದಾರೆ. ಇದೇ ಕಾರಣಕ್ಕಾಗಿ ಜೂನ್ 13 ರಿಂದ ವಿಧಾನಸೌಧದಲ್ಲಿ ಬಜೆಟ್ ಪೂರ್ವಭಾವಿ ಸಭೆಯನ್ನು (3ನೇ ಪುಟಕ್ಕೆ)

# ಸರ್ಕಾರಿ ಸಾರಿಗೆ ಫುಲ್, ಖಾಸಗಿ ಬಸ್ ಡಲ್

## ಸರ್ಕಾರದ 'ಶಕ್ತಿ'ಯಿಂದ ದಾವಣಗೆರೆ ಜಿಲ್ಲೆಯಲ್ಲಿ ನಿಶ್ಯಕ್ತವಾದ ಖಾಸಗಿ ಬಸ್ ವಲಯ

ದಾವಣಗೆರೆ, ಜೂ. 12 – ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರು ಹಾಗೂ ತೃತೀಯ ಲಿಂಗಿಗಳು ಉಚಿತವಾಗಿ ಪ್ರಯಾಣಿಸಲು ಸರ್ಕಾರ ಜಾರಿಗೆ ತಂದಿರುವ ಶಕ್ತಿ ಯೋಜನೆ, ಖಾಸಗಿ ಬಸ್ ವಲಯವನ್ನು ನಿಶ್ಯಕ್ತಗೊಳಿಸಿದೆ. ಇದರಿಂದಾಗಿ ಖಾಸಗಿ ಬಸ್ ವಲಯದ ಭವಿಷ್ಯದ ಮೇಲೆ ಪರಿಣಾಮವಾಗುತ್ತಿದೆ.

ಭಾನುವಾರದಂದು ಶಕ್ತಿ ಯೋಜನೆಗೆ ಚಾಲನೆ ನೀಡಲಾಗಿತ್ತು. ಸೋಮವಾರ ಅದರ ಪರಿಣಾಮ ಸ್ಪಷ್ಟವಾಗಿ ಕಂಡು ಬಂತು. ಸರ್ಕಾರಿ ಬಸ್‌ಗಳು ತುಂಬಿ ತುಳುಕುತ್ತಿದ್ದರೆ, ಖಾಸಗಿ ಬಸ್‌ಗಳಲ್ಲಿ ಜನಸಂದಣಿ ವಿರಳವಾಗಿತ್ತು. ಇದು ಮದುವೆಯ ಸಮಯವಾಗಿರುವುದರಿಂದ ಒಂದಿಷ್ಟು ಜನ ಖಾಸಗಿ ಬಸ್ ಕಡೆ ಬರುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇವರೂ ಬರದೇ ಇರಬಹುದು ಎಂಬ ಕಳವಳ ವ್ಯಕ್ತವಾಗುತ್ತಿತ್ತು.

ಈ ಬಗ್ಗೆ ಮಾತನಾಡಿರುವ ಖಾಸಗಿ ಬಸ್ ಏಜೆಂಟ್ ಉಮೇಶ್ ರಾವ್ ಸಾಳಂಕಿ, ಜಿಲ್ಲೆಯಲ್ಲಿ 150-180 ಸ್ಟೇಜ್ ಕ್ಯಾರಿಯರ್ ಬಸ್‌ಗಳಿವೆ. ಮದುವೆಗಳಿಗೆಂದು 50-60 ಬಸ್‌ಗಳನ್ನು ಪಡೆಯಲಾಗಿದೆ. ಹೀಗಾಗಿ ಇಂದು 100-120 ಬಸ್‌ಗಳಷ್ಟೇ ಇವೆ. ಇವೂ ಸಹ ಭರ್ತಿಯಾಗುತ್ತಿಲ್ಲ ಎಂದಿದ್ದಾರೆ.

ಜಗಳೂರು, ಹರಪನಹಳ್ಳಿ, ಬಾಡ, ಸೂಳೆಕೆರೆ ಹಾಗೂ ಚನ್ನಗಿರಿ ಮಾರ್ಗಗಳ ಖಾಸಗಿ ಬಸ್‌ಗಳಿಗೆ ಅತಿ ಹೆಚ್ಚು ಸಮಸ್ಯೆಯಾಗಿದೆ. ಕೊರೊನಾ ನಂತರ ಖಾಸಗಿ ಬಸ್‌ಗಳ ನಿರ್ವಹಣೆಯೇ (3ನೇ ಪುಟಕ್ಕೆ)

**ಶಕ್ತಿ ಯೋಜನೆ ಜಾರಿಯಾದ ಮೊದಲ ದಿನ ದಾವಣಗೆರೆ ಜಿಲ್ಲೆಯಲ್ಲಿ 9,597 ಮಹಿಳೆಯರು ಬಸ್ ನಲ್ಲಿ ಪ್ರಯಾಣಿಸಿದ್ದು, ಅದರ ವೆಚ್ಚ 3.48 ಲಕ್ಷ ರೂಪಾಯಿ. ಇಂದು ಸೋಮವಾರ 34,640 ಮಹಿಳೆಯರು ಪ್ರಯಾಣಿಸಿದ್ದು ಅದರ ವೆಚ್ಚ 15.81 ಲಕ್ಷ ರೂ.ಗಳಾಗಿದೆ.**

### ವಿದ್ಯಾರ್ಥಿನಿಯರಿಂದಲೂ ದುಡ್ಡು ಬರುತ್ತೆ

ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುವ ವಿದ್ಯಾರ್ಥಿನಿಯರ ಹಣವನ್ನು ಪಾವತಿಸುವುದಾಗಿ ಸರ್ಕಾರ ಹೇಳಿದೆ. ಹೀಗಾಗಿ ಈ ಹಿಂದೆ ಪಾಸ್‌ನಲ್ಲಿ ಪ್ರಯಾಣಿಸುತ್ತಿದ್ದವರೆಲ್ಲಾ ಈಗ ಟಿಕೆಟ್‌ಗೆ ಬರಲಿದ್ದಾರೆ. ಹೀಗಾಗಿ ವಿದ್ಯಾರ್ಥಿನಿಯರಿಂದಲೂ ಸಾರಿಗೆ ನಿಗಮಕ್ಕೆ ಹಣ ಬರಲಿದೆ. ಇದು ನಿಗಮಕ್ಕೆ ಅನುಕೂಲಕರ ಎಂಬ ಅಭಿಪ್ರಾಯಗಳು ಕೆ.ಎಸ್.ಆರ್.ಟಿ.ಸಿ. ಸಿಬ್ಬಂದಿಯಿಂದ ಕೇಳಿ ಬಂತು.



### ಇನ್ನು ಮುಂದೆ ಎಲ್ಲಾ ಸ್ಟ್ಯಾಂಡಿಂಗ್

ಸರ್ಕಾರಿ ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಚನ್ನಗಿರಿ ಕಡೆ ತೆರಳುವ ಬಸ್ ಬಗ್ಗೆ ವಿಚಾರಿಸುತ್ತಿದ್ದರು. ಬಸ್ ಫುಲ್ ರಶ್ ಇದೆ, ನಿಂತು ಹೋಗಲು ಕಷ್ಟ. ಮುಂದಿನ ಬಸ್ ಖಾಲಿ ಇರುತ್ತದೆಯಾ? ಎಂದು ಮಾಹಿತಿ ಕೇಂದ್ರದ ಸಿಬ್ಬಂದಿಗೆ ಕೇಳಿದರು. ಫ್ರೀ ಅಂದ ಮೇಲೆ ಬಸ್ ಫುಲ್ ಆಗಿಯೇ ಇರುತ್ತದೆ. ಇನ್ನು ಮುಂದೆ ಸ್ಟಾಂಡಿಂಗೇ ಇರುತ್ತದೆ. ಏನೂ ಮಾಡಲಾಗದು ಎಂದು ಮಹಿಳೆಗೆ ತಿಳಿಸುತ್ತಿದ್ದುದು ಕಂಡು ಬಂತು.

### ಮೊಬೈಲ್ ಸ್ವಿಚ್ ಆಫ್ ಆದ್ರೆ?

ಮಹಿಳೆಯೊಬ್ಬರು, ಮೊಬೈಲ್‌ನಲ್ಲಿ ಗುರುತಿನ ಚೀಟಿ ತೋರಿಸಿದರೆ ಸಾಲದೇ? ಎಂದು ಕಂಡಕ್ಟರ್ ಬಳಿ ವಿಚಾರಿಸುತ್ತಿದ್ದರು. ಅದಕ್ಕೆ ಕಂಡಕ್ಟರ್, ನೀವೇನೋ ಮೊಬೈಲ್‌ನಲ್ಲಿ ಗುರುತು ತೋರಿಸುತ್ತೀರಿ. ಆಮೇಲೆ ಚಾರ್ಜ್ ಖಾಲಿ ಆಗಿ ಆಫ್ ಆಗುತ್ತೆ. ಆಗ ಚೆಕ್ಕಿಂಗ್ ಬಂದರೆ ಏನು ಹೇಳಬೇಕು? ಒರಿಜಿನಲ್ ಅಲ್ಲದಿದ್ದರೂ ಪರವಾಗಿಲ್ಲ, ಜೆರಾಕ್ಸ್ ಗುರುತಿನ ಚೀಟಿಯಾದರೂ ಬೇಕು ಎಂದು ತಿಳಿಸಿದರು.

## 2 ವರ್ಷಗಳಲ್ಲೇ ಕಡಿಮೆ ಹಂತಕ್ಕೆ ಚಿಲ್ಲರೆ ಹಣದುಬ್ಬರ

ನವದೆಹಲಿ, ಜೂ. 12 – ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ 25 ತಿಂಗಳಲ್ಲೇ ಅತಿ ಕಡಿಮೆ ಶೇ.4.25ಕ್ಕೆ ತಲುಪಿದೆ. ಆಹಾರ ಹಾಗೂ ಇಂಧನ ಬೆಲೆಗಳು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆಯಾಗಿದೆ.

ಸತತ ನಾಲ್ಕನೇ ತಿಂಗಳು ಚಿಲ್ಲರೆ ಹಣದುಬ್ಬರ ಇಳಿಕೆಯಾಗಿದೆ. ಇದು ರಿಸರ್ವ್ ಬ್ಯಾಂಕ್‌ನ ಅಪೇಕ್ಷಿತ ಮಟ್ಟವಾದ ಶೇ.6ಕ್ಕಿಂತ ಕೆಳಗಿದೆ.

ಏಪ್ರಿಲ್ 2021ರಂದು ಚಿಲ್ಲರೆ ಹಣದುಬ್ಬರ ಶೇ.4.23ರಷ್ಟಿತ್ತು. ಆನಂತರ ಇದೇ ಮೊದಲ ಬಾರಿಗೆ ಹಣದುಬ್ಬರ ಅತಿ ಕಡಿಮೆ ಹಂತಕ್ಕೆ ಬಂದಿದೆ.

# ಜಗಳೂರು: ಮುಗ್ಗರಿಸಿದ ಮುಂಗಾರು; ಕೈ ಹಿಡಿದ ಖಾತ್ರಿ

ಬಿ.ಪಿ. ಸುಭಾನ್

ಜಗಳೂರು, ಜೂ.12- ತಾಲೂಕಿನಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ವಾಡಿಕೆ ಮಳೆಗಿಂತ ಶೇಕಡ 33ರಷ್ಟು ಕಡಿಮೆ ಮಳೆಯಾಗಿದ್ದು ಮುಂಗಾರು ಮುಗ್ಗರಿಸಿದಂತಾಗಿದೆ. ಹೀಗಾಗಿ ರೈತರು ಆಕಾಶದತ್ತ ಮುಖ ಮಾಡುವಂತಾಗಿದೆ.

ಈ ವರ್ಷದ ವಾಡಿಕೆ ಮಳೆ 107.5 ಮಿಲಿಮೀಟರ್. ಈವರೆಗೆ ಬಿದ್ದ ಮಳೆ 72.3 ಮಿಲಿಮೀಟರ್ ಶೇಕಡ 33 ರಷ್ಟು ಕಡಿಮೆ ಪ್ರಮಾಣದ ಮಳೆಯಾಗಿರುತ್ತದೆ. 55000 ಹೆಕ್ಟೇರ್ ಬಿತ್ತನೆ ಕ್ಷೇತ್ರದಲ್ಲಿ ಈವರೆಗೆ 510 ಹೆಕ್ಟೇರ್ ಹತ್ತಿ ಮತ್ತು 55 ಹೆಕ್ಟೇರ್ ಮೆಕ್ಕೆಜೋಳ ಮಾತ್ರ ಬಿತ್ತನೆಯಾಗಿದೆ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ಸಮರ್ಪಕ ಮಳೆ ಆಗದೇ ಇರುವುದರಿಂದ ಬಿತ್ತನೆ ಹಾಗೂ ಇತರೆ ಚಟುವಟಿಕೆಗಳು ಸ್ತಬ್ಧಗೊಂಡಿದ್ದು ಕೃಷಿ ಕೂಲಿ ಕಾರ್ಮಿಕರಿಗೆ ಕೆಲಸ ಇಲ್ಲದ ಪರಿಸ್ಥಿತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಕೈ ಹಿಡಿದಿದೆ.



ತಾಲ್ಲೂಕಿನಾದ್ಯಂತ 22 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಏಪ್ರಿಲ್ ತಿಂಗಳಿಂದ ಇಲ್ಲಿಯವರೆಗೆ 24 ಸಾಮೂಹಿಕ ಕಾಮಗಾರಿಗಳು ಮತ್ತು 64 ವೈಯಕ್ತಿಕ ಕಾಮಗಾರಿಗಳಿಂದ ಒಟ್ಟು 2,44,555 ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿದೆ.

ಸಾಮೂಹಿಕ ಕಾಮಗಾರಿಗಳಲ್ಲಿ ಸಮಗ್ರ ಕೆರೆ ಅಭಿವೃದ್ಧಿ ಮತ್ತು ಫೀಲ್ಡರ್ ಚಾನೆಲ್ ಕಾಮಗಾರಿಗಳು ಮತ್ತು ವೈಯಕ್ತಿಕ ಕಾಮಗಾರಿಯಲ್ಲಿ ರೇಷ್ಮೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಕಾಮಗಾರಿಗಳು ನಡೆದಿವೆ.

ತಾಲೂಕಿನ ಅಸಗೋಡು ಗ್ರಾಮ ಪಂಚಾಯಿತಿ, ದೊಣ್ಣೆಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಸು. 30 ಸಾವಿರ ಮಾನವ ದಿನಗಳ ಕಾಮಗಾರಿ ನಡೆದಿದೆ. ಉಳಿದಂತೆ ಬಿಳಿಚೋಡು, ದಿದ್ದಿಗಿ, ಹೊಸಕೆರೆ, ಕ್ಯಾಸೇನಹಳ್ಳಿ, ಮುಸ್ಟೂರು, ಪಲ್ಲಾಗಟ್ಟೆ, ಸೊಕ್ಕೆ ಮತ್ತು ತೋರಣಗಟ್ಟೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಮಾನವ ದಿನಗಳ ಸೃಜನೆಯಾಗಿವೆ.

ಕೃಷಿ ಇಲಾಖೆ ವ್ಯಾಪ್ತಿಯಲ್ಲಿ ನಾಲ್ಕು 'ಕಂದಕ ಬದು' ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿ ಇದ್ದು, ಎರಡು ಕಾಮಗಾರಿಗಳು ಪೂರ್ಣಗೊಂಡಿವೆ. ಸುಮಾರು ನಾಲ್ಕು ಸಾವಿರ ಮಾನವ ದಿನಗಳು ಸೃಜನೆಯಾಗಿ ಕಾರ್ಮಿಕರಿಗೆ ನೆರವಾಗಿದೆ ಎನ್ನುತ್ತಾರೆ ಮರಿಕಟ್ಟೆ. (3ನೇ ಪುಟಕ್ಕೆ)

### ಪಿಡಿಒಗಳ ಕೊರತೆ

**ತಾಲ್ಲೂಕಿನ 22 ಗ್ರಾಮ ಪಂಚಾಯಿತಿಗಳಿಗೆ 13 ಜನ ಮಾತ್ರ ಕಾಯಂ ಪಿಡಿಒಗಳಿದ್ದು, ನಾಲ್ವರು ನಿಯೋಜನೆ ಮೇಲೆ ಬಂದಿದ್ದಾರೆ. ಉಳಿದಂತೆ ಆರು ಜನ ಗ್ರೇಡ್1 ಕಾರ್ಯದರ್ಶಿಗಳಿಗೆ ಪಿಡಿಒ ಪ್ರಭಾರ ವಹಿಸಲಾಗಿದೆ.**

**ಕಳೆದ ವರ್ಷ ಉದ್ಯೋಗ ಖಾತ್ರಿ ಯೋಜನೆ ಮತ್ತು 14ನೇ ಹಣಕಾಸು ಯೋಜನೆಯ ಅವ್ಯವಹಾರಕ್ಕೆ ಸಂಬಂಧಿಸಿದಂತೆ. ಕೆಲವು ಪಿಡಿಒಗಳು ಅಮಾನತ್ತುಕೊಂಡರೆ ಇನ್ನೂ ಕೆಲವರು ತನಿಖೆ ಎದುರಿಸುತ್ತಿದ್ದಾರೆ. ಒಟ್ಟಾರೆ ಹಲವಾರು ಗ್ರಾಮ ಪಂಚಾಯಿತಿಗಳ ಖಾಯಂ ಪಿಡಿಒಗಳು ಇಲ್ಲವಾಗಿದೆ.**

## ಉಚಿತ ಪ್ರಯಾಣಕ್ಕೆ ಡಿಜಿ ಲಾಕರ್ ಬಳಸಲು ಆದೇಶ

ಬೆಂಗಳೂರು, ಜೂ. 12 - ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ವೇಳೆ ಮಹಿಳೆಯರು ಮೊಬೈಲ್‌ನ ಡಿಜಿ ಲಾಕರ್‌ನಲ್ಲಿರುವ ಭಾವಚಿತ್ರವಿರುವ ಯಾವುದೇ ಸರ್ಕಾರಿ ಗುರುತಿನ ಚೀಟಿಯನ್ನು ತೋರಿಸಬಹುದು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯದಲ್ಲಿ ಭಾನುವಾರದಿಂದ ಕಾಂಗ್ರೆಸ್ ಸರ್ಕಾರವು ಮಹಿಳೆಯರ ಉಚಿತ ಪ್ರಯಾಣಕ್ಕೆ ಶಕ್ತಿ ಯೋಜನೆಯನ್ನು ಜಾರಿಗೊಳಿಸಿತ್ತು. ಆದರೆ, ಮಹಿಳಾ ಪ್ರಯಾಣಿಕರು ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿಯ ಮೂಲ ಪ್ರತಿಯನ್ನೇ ತೋರಿಸಬೇಕು ಎಂದು ಬಸ್ ನಿರ್ವಾಹಕರು ಹೇಳಿದ್ದರು. ಇದರಿಂದ ಕೆಲ ಮಹಿಳೆಯರು ಸಮಸ್ಯೆ ಎದುರಿಸುತ್ತಿದ್ದರು. ಈ ಗೊಂದಲಕ್ಕೆ ತೆರೆ ಎಳೆದಿರುವ ಸರ್ಕಾರ, ಮೂಲ ದಾಖಲೆಯ ಜೆರಾಕ್ಸ್ ಪ್ರತಿ ಇಲ್ಲವೇ ಮೊಬೈಲ್‌ನ ಡಿಜಿಲಾಕರ್‌ನಲ್ಲಿರುವ ಭಾವಚಿತ್ರದ ಗುರುತಿನ ಚೀಟಿ ತೋರಿಸಿಯೂ ಉಚಿತ ಪ್ರಯಾಣ ಮಾಡಬಹುದು ಎಂದು ಹೇಳಿದೆ.

|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||
ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ
ಚಿತ್ರದುರ್ಗ ತಾ. ಕೋಗುಂಡೆ ಗ್ರಾಮದ, ದಾವಣಗೆರೆ ಸಿಟಿ ನಿವಾಸಿ
ಶ್ರೀ ಕೆ.ಎನ್. ಸಿದ್ದಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 09-06-2023 ನೇ ಶುಕ್ರವಾರ ಬೆಳಿಗ್ಗೆ ನಮ್ಮ ಮೊಮ್ಮಗ

ಚಿ|| ಮನೀಷ್.ಜಿ
(ಶ್ರೀ ಎಸ್. ಗಿರೀಶ್, ಇಂಜಿನಿಯರ್, ದಾವಣಗೆರೆ ಷುಗರ್ ಕಂಪನಿ, ಕುಕ್ಕುವಾಡ ದಿ|| ಶ್ರೀಮತಿ ಶಶಿಕಲಾ ಇವರ ಪುತ್ರ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 14.06.2023ನೇ ಬುಧವಾರ ಬೆಳಿಗ್ಗೆ 10.30 ಕ್ಕೆ ದಾವಣಗೆರೆ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಶಿವರುದ್ರಮ್ಮ, ಕೆ.ಎನ್.ಸಿದ್ದಪ್ಪ ಮತ್ತು ಸಹೋದರರು ಮತ್ತು ಮಕ್ಕಳು, ಕೋಗುಂಡೆ ಗೌಡ್ರು ವಂಶಸ್ಥರು, ಕೋಗುಂಡೆ
ಶ್ರೀಮತಿ ನಾಗಮ್ಮ ದಿ|| ನಂಜುಂಡಪ್ಪ ಮತ್ತು ಮಕ್ಕಳು ಹಾಗೂ ಕುರ್ಕಿ ಗೌಡ್ರು ವಂಶಸ್ಥರು, ಕುರ್ಕಿ.
ಮೊ. : 97406 42291, 99808 40624, 98865 96905
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಹೊಸ ಮನೆ, ಬಾಡಿಗೆ ಮನೆಗೆ 58 ಯೂನಿಟ್ ವಿದ್ಯುತ್ ಫ್ರೀ

ಬೆಂಗಳೂರು ಜೂ.12 - ಹೊಸಮನೆ ಹಾಗೂ ಹೊಸದಾಗಿ ಬಾಡಿಗೆ ಮನೆಗೆ ಬಂದವರಿಗೂ ಉಚಿತ ವಿದ್ಯುತ್ ನೀಡಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಮಾಸಿಕ ಸರಾಸರಿ 53 ಯುನಿಟ್ ಜತೆಗೆ ಶೇ 10ರಷ್ಟು ಹೆಚ್ಚುವರಿಯಾಗಿ ಅಂದರೆ ಒಟ್ಟು 58 ಯುನಿಟ್ ಉಚಿತವಾಗಿ ದೊರೆಯಲಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹ ಜ್ಯೋತಿ ಯೋಜನೆಯಡಿ 2022ರ ಏಪ್ರಿಲ್ ಒಂದರಿಂದ 2023ರ ಮಾರ್ಚ್31ರ ವರೆಗಿನ ಸರಾಸರಿ ವಿದ್ಯುತ್ ಬಳಕೆ ಮಾಡಿರುವುದನ್ನು ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ಆದರೆ, ಹೊಸ ಮನೆ ಹಾಗೂ ಹೊಸದಾಗಿ ಬಾಡಿಗೆ ಮನೆ ಮಾಡಿಕೊಂಡವರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಈ ಸೂತ್ರ ರೂಪಿಸಲಾಗಿದೆ. ಜುಲೈ ಒಂದರಿಂದ ಉಚಿತ ವಿದ್ಯುತ್ ಯೋಜನೆ ಜಾರಿಗೊಳ್ಳಲಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ವಿದ್ಯುತ್ ದರ ಹೆಚ್ಚಳ ಮಾಡಿದ್ದರೆ, ಸಮಸ್ಯೆ ಆಗುತ್ತಿರಲಿಲ್ಲ.

ಏಪ್ರಿಲ್ ಒಂದರಿಂದ ಅನ್ವಯವಾಗುವಂತೆ ಮೇ ನಲ್ಲಿ ವಿದ್ಯುತ್ ದರ ಪರಿಷ್ಕರಣೆ ಮಾಡಿರುವುದರಿಂದ ನಾವು ಜಾರಿ ಮಾಡಬೇಕಾಯಿತು.

100 ಯುನಿಟ್ ವರೆಗೆ 4.75 ರೂ. ನೂರು ಯುನಿಟ್ ನಂತರ ಪ್ರತಿ ಯುನಿಟ್‌ಗೆ 7 ರೂ ದರವನ್ನು ಕೆಇಆರ್‌ಸಿ ನಿಗದಿಪಡಿಸಿದೆ.

ಕಾಲಕಾಲಕ್ಕೆ ವಿದ್ಯುತ್ ಕಂಪನಿಗಳು ದರ ಪರಿಷ್ಕರಣೆಗಾಗಿ ಕೆಇಆರ್ ಸಿಗೆ ಪ್ರಸ್ತಾವನೆ ಸಲ್ಲಿಸುತ್ತವೆ. ಅದರ ಬಗ್ಗೆ ಆಕ್ಷೇಪಣೆಗಳನ್ನು (3ನೇ ಪುಟಕ್ಕೆ)

## ಮುರುಘಾಮಠಕ್ಕೆ ಆಡಳಿತಾಧಿಕಾರಿ ನೇಮಕ ರದ್ದು : ತೀರ್ಪಿನ ವಿರುದ್ಧ ಮೇಲ್ಮನವಿ ಅಗತ್ಯವಿಲ್ಲ

ಬೆಂಗಳೂರು, ಜೂ.12- ಚಿತ್ರದುರ್ಗ ಮುರುಘಾ ಮಠಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ್ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ, ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ರದ್ದುಪಡಿಸಿರುವ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಪ್ರಶ್ನಿಸಿ, ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲ ಎಂದು ಅಡ್ವೊಕೇಟ್ ಜನರಲ್ ಕಚೇರಿ ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ರಾಜ್ಯ ಅಡ್ವೋಕೇಟ್ ಜನರಲ್ ಕಚೇರಿಯು ಕಂದಾಯ ಇಲಾಖೆಯ ಕಾನೂನು ವಿಭಾಗದ ಮುಖ್ಯಸ್ಥರಿಗೆ ತನ್ನ ಮೂರು ಪುಟಗಳ ಅಭಿಪ್ರಾಯ ರವಾನಿಸಿದ್ದು, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಏಕಸದಸ್ಯ ನ್ಯಾಯಪೀಠದ ತೀರ್ಪಿನಲ್ಲಿ ಯಾವುದೇ ಆಕ್ಷೇಪಣೆ ವ್ಯಕ್ತಪಡಿಸುವ ಅಂಶಗಳು ಕಂಡುಬರುತ್ತಿಲ್ಲ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಬೇಕಾಗಿಲ್ಲ ಎಂಬ ಸ್ಪಷ್ಟ ನಿಲುವನ್ನು ದಾಖಲಿಸಿದೆ.



ಮುರುಘಾಮಠದ ಪೀಠಾಧಿಪತಿ ಶ್ರೀ ಶಿವಮೂರ್ತಿ ಮುರುಘಾ ಶರಣರು ಅಲಿಯಾಸ್ ಶಿವಮೂರ್ತಯ್ಯ, ಪೋಕ್ಸೋ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಪ್ರಕರಣದಲ್ಲಿ ಜೈಲು ಸೇರಿದ್ದ ಹಿನ್ನೆಲೆಯಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರವು ಪಿ.ಎಸ್.ವಸ್ತ್ರದ್ ಅವರನ್ನು 2022ರ ಡಿಸೆಂಬರ್ 13ರಂದು ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿತ್ತು. ವಸ್ತ್ರದ್ 2022ರ ಡಿಸೆಂಬರ್ 15ರಂದು ಅಧಿಕಾರ ಸ್ವೀಕರಿಸಿದ್ದರು.

ರಾಜ್ಯ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಮಠದ ತಾತ್ಕಾಲಿಕ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ (2ನೇ ಪುಟಕ್ಕೆ)

### ಅಡ್ವೊಕೇಟ್ ಜನರಲ್ ನಿಲುವು

# ಬೆಳ್ಳೂಡಿ : ದೇವಸ್ಥಾನದ ಜೀರ್ಣೋದ್ಧಾರಕ್ಕೆ ಧರ್ಮಸ್ಥಳದ ನೆರವು

ಮಲೇಬೆನ್ನೂರು, ಜೂ.12- ಬೆಳ್ಳೂಡಿ ಗ್ರಾಮದ ಶ್ರೀ ಚಂದ್ರಗುತ್ತೆಮ್ಮ ದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಧರ್ಮಾಧಿಕಾರಿ ಡಾ. ವಿ.ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿದ 2 ಲಕ್ಷ ರೂ.ಗಳ ಡಿಡಿಯನ್ನು ಯೋನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ್ ಅವರು ಸೋಮವಾರ ದೇವಸ್ಥಾನದ ಸಮಿತಿಯವರಿಗೆ ಹಸ್ತಾಂತರಿಸಿದರು.



ಈ ವೇಳೆ ಮಾತನಾಡಿದ ವಿಜಯಕುಮಾರ್ ನಾಗನಾಳ್ ಅವರು, ಪೂಜ್ಯ ವೀರೇಂದ್ರ ಹೆಗ್ಗಡೆ ಅವರ ಆಶಯದಂತೆ ಗ್ರಾಮೀಣ ಜನರ ಬದುಕನ್ನು ಹಸನಗೊಳಿಸುವ ನಿಟ್ಟಿನಲ್ಲಿ ನಮ್ಮ ಗ್ರಾಮಾಭಿವೃದ್ಧಿ ಯೋಜನೆ ಎಲ್ಲಾ ಹಂತಗಳಲ್ಲೂ ಕೆಲಸ ಮಾಡುತ್ತಿದೆ. ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ನೆರವು ನೀಡುವ ಮೂಲಕ ಜನರಲ್ಲಿ ಧಾರ್ಮಿಕ ಹಾಗೂ ಅಧ್ಯಾತ್ಮಿಕ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ. ದೇವಸ್ಥಾನಗಳನ್ನು ಸ್ವಚ್ಛವಾಗಿ ಹಾಗೂ ಸುಂದರವಾಗಿ ಇಟ್ಟುಕೊಳ್ಳಿ ಎಂದು ಗ್ರಾಮಸ್ಥರಿಗೆ ತಿಳಿಸಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಬಿ. ಉಮೇಶ್, ವಕೀಲರಾದ ಕೆ.ಚನ್ನಪ್ಪ ಮಾತನಾಡಿ, ಧರ್ಮಸ್ಥಳ ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹರಿಹರ ಯೋಜನಾಧಿಕಾರಿ ಗಣಪತಿ ಮಾಳಂಜಿ, ಗ್ರಾ.ಪಂ. ಪಿಡಿಓ ಶಿವಪ್ಪ ಬಿರಾದಾರ್, ಮಾಗನೂರು ಹನುಮಂತಪ್ಪ, ಆಶಾ ಶಂಭುಲಿಂಗಪ್ಪ, ಸುನೀತಾ ಪರಶುರಾಮ್, ವೀರೇಶ್, ಸುದೀಪ್‌ಗೌಡ್ರು, ಸಿದ್ದೇಶಪ್ಪ, ದೇವಸ್ಥಾನದ ಸಮಿತಿಯ ಕೆ.ಪರಮೇಶಪ್ಪ, ಬಿ.ಸಿದ್ದೇಶ್, ಎಂ.ಎನ್.ಬಸವರಾಜ್, ಚಂದ್ರಪ್ಪ, ಹನುಮಂತಪ್ಪ, ವಿಜಯಕುಮಾರ್, ಬೆಳ್ಳೂಡಿ ಒಕ್ಕೂಟದ ಅಧ್ಯಕ್ಷೆ ಸುನಂದಮ್ಮ, ಬೆಳ್ಳೂಡಿ ವಲಯದ ಮೇಲ್ವಿಚಾರಕಿ ಗಂಗಮ್ಮ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು ಮತ್ತು ಸೇವಾ ಪ್ರತಿನಿಧಿಗಳು ಈ ವೇಳೆ ಹಾಜರಿದ್ದರು.

# ಅಪೂರ್ಣ ಕೆಲಸಗಳನ್ನು ತತ್‌ಕ್ಷಣವೇ ಪೂರ್ಣಗೊಳಿಸಿ

## ಹರಪನಹಳ್ಳಿ ತಾ.ಪಂ. ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ನಿರ್ದೇಶನ

ಹರಪನಹಳ್ಳಿ, ಜೂ. 12 - ಅಪೂರ್ಣಗೊಂಡಿರುವ ಕೆಲಸಗಳನ್ನು ಕೂಡಲೇ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಿ ಎಂದು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಶಾಸಕರಾದ ಶ್ರೀಮತಿ ಎಂ.ಪಿ. ಲತಾ ನಿರ್ದೇಶಿಸಿದರು.



ಪಟ್ಟಣದ ತಾಲ್ಲೂಕು ಪಂಚಾಯಿತಿ ರಾಜೀವಗಾಂಧಿ ಸಭಾಂಗಣದಲ್ಲಿ ನೂತನ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ನೇತೃತ್ವದಲ್ಲಿ ನಡೆದ ಪ್ರಥಮ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ತಾಲ್ಲೂಕಿನಲ್ಲಿ ಒಟ್ಟು 37 ಇಲಾಖೆಗಳಲ್ಲಿ ಇದುವರೆಗೂ ನಡೆದಿರುವ ಯಾವುದೇ ಕೆಲಸಗಳು ಇರಲಿ ಅವುಗಳನ್ನು ತ್ವರಿತಗತಿಯಲ್ಲಿ ಮಾಡಿ ಮುಗಿಸಿ ಎಂದರು.

ಕೆಆರ್‌ಡಿಎಲ್ (ಲ್ಯಾಂಡ್ ಆರ್ಮಿ) ಇಲಾಖೆ ಯಲ್ಲಿ ಸುಮಾರು ಕಾಮಗಾರಿಗಳು ಅಪೂರ್ಣ ಗೊಂಡಿದ್ದು, ಇವುಗಳನ್ನು ಕೂಡಲೇ ಪೂರ್ಣಗೊಳಿಸಿ ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸಬೇಕು ಎಂದು ಇಲಾಖೆಯ ಎಇಇ ಅಧಿಕಾರಿ ರಮೇಶ್‌ರ ವರಿಗೆ ಸೂಚಿಸಿದ ಅವರು ಈ ಇಲಾಖೆಯನ್ನು ನಮ್ಮ ತಂದೆ ಹುಟ್ಟು ಹಾಕಿದ್ದಾರೆ, ಇದನ್ನು ಮೇಲೆತ್ತುವ ಕೆಲಸ ಮಾಡಿ, ಕೆಳಗಿಳಿಸಬೇಡಿ ಎಂದು ಹೇಳಿದರು.

ಲೋಕಪಯೋಗಿ ಇಲಾಖೆಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆದ ಶಾಸಕರು ಕಾಮಗಾರಿ ಯಾವ ಹಂತದಲ್ಲಿದೆ, ಗುತ್ತಿಗೆದಾರರು ಯಾರು, ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡದಿದ್ದರೆ ಹೇಗೆ ಎಂದು ಎಇಇ ಸತೀಶಪಾಟೀಲ್ ಅವರಿಗೆ ಪ್ರಶ್ನಿಸಿದ ಅವರು ಹೀಗೆ ಮುಂದುವರೆದರೆ ಕಷ್ಟವಾಗಲಿದೆ ಎಂದು ಎಚ್ಚರಿಸಿದರು.

ಪಟ್ಟಣದ ಗೋಸಾಯಿ ಗುಡ್ಡದ ಮೇಲೆ ನ್ಯಾಯಾಲಯದ ಕಟ್ಟಡ ಕಾಮಗಾರಿ ಎಷ್ಟು ಕಳಪೆಯಿಂದ ಕೂಡಿದೆ ಎನ್ನುವ ಬಗ್ಗೆ ನಿಮ್ಮ ಗಮನಕ್ಕೆ ಇದೆಯಾ, ಸ್ಥಳಕ್ಕೆ ಬೇಟಿ ನೀಡಿ ವಿಕ್ಷಣೆ ಮಾಡಿದಾಗ ಚಿಕ್ಕ ಗಾತ್ರದಲ್ಲಿ ಬಾಗಿಲನ್ನು ಹಾಕಲಾಗಿದೆ. ಈ ರೀತಿ ನ್ಯಾಯಾಲಯ ಕಟ್ಟಡ ಕಳಪೆಯಿಂದ ಕೂಡಿದ್ದು ಇದನ್ನು ಸರಿಪಡಿಸಿ ಎಂದು ಸೂಚಿಸಿದರು.

ತಾಲ್ಲೂಕಿನ 59 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ನನ್ನ ಗಮನಕ್ಕಿದೆ ಅವುಗಳನ್ನು ಕೂಡಲೇ ಸರಿಪಡಿಸಿ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗೆ ಸೂಚಿಸಿದರು.

ಈಗಾಗಲೇ ಮುಂಗಾರು ಚುರುಕುಗೊಂಡಿದ್ದು ರೈತರಿಗೆ ಬೀಜ-ಗೊಬ್ಬರ ಕೊರತೆ ಆಗದಂತೆ ನೋಡಿಕೊಳ್ಳಿ ಖಾಲಿ ಇರುವ ಹುದ್ದೆಗಳ ವಿವರ ನನಗೆ ಕೊಡಿ ನಾನು ಕೃಷಿ ಸಚಿವರ ಗಮನಕ್ಕೆ ತರುತ್ತೇನೆ ಎಂದು ಕೃಷಿ ಅಧಿಕಾರಿ ಮಂಜುನಾಥ ಗೊಂದಿಯವರಿಗೆ ತಿಳಿಸಿದರು.

ಕಳೆದ ಬಾರಿ ಹಲುವಾಗಲು ಗ್ರಾಮದಲ್ಲಿ ಮಕ್ಕಳ ಬಿಸಿಯೂಟದಲ್ಲಿ ಹುಳುಗಳು ಪತ್ತೆಯಾಗಿದ್ದ ಹಿನ್ನೆಲೆಯಲ್ಲಿ ಮತ್ತೆ ಅದೇ ರೀತಿ ಘಟನೆ ಮರುಕಳಿಸದಂತೆ ಮುಂಜಾಗೃತೆ ವಹಿಸಿ, ಮಳೆಗಾಲ ಆರಂಭವಾಗಿದ್ದು ಶಿಥಿಲಗೊಂಡಿರುವ ಶಾಲಾ ಕೊಠಡಿಗಳ ಬಗ್ಗೆ ಎಚ್ಚರಿಕೆವಹಿಸಿ ದುರಸ್ಥಿ ಮಾಡಿಕೊಳ್ಳಲು ಮುಂದಾಗುವಂತೆ ಹೇಳಿದರು.

ಅನೇಕ ಹಳ್ಳಿಗಳಲ್ಲಿ ಸ್ಮಶಾನಗಳು ಇಲ್ಲದಂತಾಗಿವೆ ಆದ್ದರಿಂದ ಸ್ಮಶಾನ ಇಲ್ಲದ ಕಡೆಗಳಲ್ಲಿ ಸ್ಥಳಗಳನ್ನು ಗುರುತಿಸಿ ಅಲ್ಲಿನ ಜನರಿಗೆ ಅನುಕೂಲಕ ಕಲ್ಪಿಸಿ ಎಂದು ತಹಶೀಲ್ದಾರ್ ಶಿವಕುಮಾರ ಬಿರಾದಾರಗೆ ತಿಳಿಸಿದರು.

ಪಡಿತರ ಅಕ್ಕಿ ಕಳ್ಳ ಸಂತೆಯಲ್ಲಿ ಮಾರಾಟವಾಗದಂತೆ ಕ್ರಮ ವಹಿಸಿ, ಸರ್ಕಾರದ ಯೋಜನೆಗಳು ಪೋಲಾಗದಂತೆ ನೋಡಿಕೊಳ್ಳಿ ಎಂದ ಅವರು ಹೊರವಲಯದಲ್ಲಿರುವ ಕುರಿ ಮತ್ತು ಮೇಕೆ ಸಂತೆ ಮಾರುಕಟ್ಟೆಗೆ ವಾಹನಗಳ ಪಾರ್ಕಿಂಗ್‌ಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕಿನ ಬಹುಬೇಡಿಕೆಯಾಗಿರುವ ಗರ್ಭಗುಡಿ ಬ್ರಿಡ್ಜ್ ಬ್ಯಾರೇಜ್ ನಿರ್ಮಾಣ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದೆ ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕು ಎಂದು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗೆ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಹಾಗೂ ಬಿಸಿಎಂ ಇಲಾಖೆಯ ವರದಿಯನ್ನು ಪಡೆದ ಶಾಸಕರು ಇಲಾಖೆಯ ವಸತಿ ನಿಲಯಗಳ ಹೊಸ ಕಟ್ಟಡಗಳನ್ನು ಪೂರ್ಣಗೊಳಿಸಿ ಕೂಡಲೇ ಹಸ್ತಾಂತರಿಸುವಂತೆ ಕೆಆರ್‌ಡಿಎಲ್ ಅಧಿಕಾರಿಗಳಿಗೆ ಸೂಚಿಸಿದರು.

ವಲಯ ಹಾಗೂ ಸಾಮಾಜಿಕ ಅರಣ್ಯ, ವಿದ್ಯುತ್ ಇಲಾಖೆ, ಮೀನುಗಾರಿಕೆ, ಆರೋಗ್ಯ, ಪುರಸಭೆ, ಪಶುಸಂಗೋಪನೆ, ತೋಟಗಾರಿಕೆ, ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ವರದಿಯನ್ನು ಪಡೆದರು.

ಕೈಗಾರಿಕೆ ಇಲಾಖೆ, ಪಿಎಂಜೆಎಸ್‌ವೈ, ಸಹಕಾರ ಇಲಾಖೆ, ನಿರ್ಮಿತಿ ಕೇಂದ್ರ ಸೇರಿದಂತೆ ಸಭೆಗೆ ಗೈರಾಗಿರುವ ಇಲಾಖೆಯ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ತಾ.ಪಂ. ಇಓ ಅವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾದಿಕಾರಿ ಟಿ.ವಿ.ಪ್ರಕಾಶ್, ತಹಶೀಲ್ದಾರ್ ಶಿವಕುಮಾರ ಬಿರಾದಾರ, ತಾ.ಪಂ. ಇಓ ಕೆ.ಆರ್.ಪ್ರಕಾಶ್, ಪುರಸಭೆ ಮುಖ್ಯಾಧಿಕಾರಿ ಶಿವಕುಮಾರ ಎರಗುಡಿ ಸೇರಿದಂತೆ ಇತರರು ಇದ್ದರು.

# ಹರಿಹರ : ಉಚಿತ ಬಸ್ ಸೌಲಭ್ಯ ; ಮಹಿಳೆಯರ ಸಂಖ್ಯೆ ಹೆಚ್ಚಳ




ಹರಿಹರ, ಜು. 12- ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿದ ಹಿನ್ನೆಲೆಯಲ್ಲಿ, ನಗರಗಳಿಗೆ ಬಂದ ಬಸ್‌ಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದುದು ಕಂಡು ಬಂತು. ರಾಜ್ಯದ ಹೃದಯ ಭಾಗದಲ್ಲಿರುವ ಹರಿಹರ ನಿಲ್ದಾಣಕ್ಕೆ ದಿನಕ್ಕೆ ಕನಿಷ್ಠ 1300 ಬಸ್‌ಗಳು ಬರುತ್ತವೆ. ಉಚಿತ ಬಸ್ ಪ್ರಯಾಣವಿದ್ದರೂ ಸಹ, ಬಸ್‌ಗಳಲ್ಲಿ ನೂಕುನುಗ್ಗಲು ಇರಲಿಲ್ಲ. ಆದರೆ, ಸಂಜೆ ವೇಳೆ ಹಲವು ಗ್ರಾಮಗಳ ಬಸ್‌ಗಳಲ್ಲಿ ಹೆಚ್ಚಿನ ಜನಸಂದಣಿ ಕಂಡು ಬಂತು.

ಸೋಮವಾರದಂದು ನಗರದ ಪ್ರಸಿದ್ಧ ಐತಿಹಾಸಿಕ ದೇವಸ್ಥಾನವಾದ ಶ್ರೀ ಹರಿಹರೇಶ್ವರ ಮತ್ತು ಲಕ್ಷ್ಮಿ ದೇವಸ್ಥಾನದಲ್ಲಿ ದೇವರ ದರ್ಶನಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಆಗಮಿಸಿದ್ದರು.

ಬಸ್ ಪ್ರಯಾಣ ಉಚಿತವಿದ್ದ ಕಾರಣ ಮೆಟೆಡೋರ್, ಆಪೆ ಆಟೋ ಮತ್ತಿತರೆ ವಾಹನಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಕಡಿಮೆಯಾಗಿತ್ತು.


**ಸವಿನೆನಪು**



**ದಿ|| ಶ್ರೀ ಬೆಳಗಾವಿ ಬಸಟೆಪ್ಪನವರು**
(ಜೆ.ಜೆ.ಎಂ. ಮೆಡಿಕಲ್ ಕಾಲೇಜ್)
ದೊಡ್ಡಪೇಟೆ, ದಾವಣಗೆರೆ.
ನಿಧನ: 13-06-2007
ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು.
ಸದಾ ತಮ್ಮ ನೆನಪಿನಲ್ಲಿರುವ,
ಪುತ್ರಿ : ಸುವರ್ಣ ಬೆಳಗಾವಿ ಮತ್ತು ಬೆಳಗಾವಿ ವಂಶಸ್ಥರು ಹಾಗೂ ಬಂಧು-ಮಿತ್ರರು.



ನೇತ್ರ ದಾನ ಶ್ರೇಷ್ಠ ದಾನ



**ಸವಿತ ಸಮಾಜದ ದರೂರ್ ಶ್ರೀನಿವಾಸ ಕಟ್ಟಿಮನಿ ನಿಧನ**



ದಾವಣಗೆರೆ ಎಸ್.ಓ.ಜಿ. ಕಾಲೊನಿ ವಾಸಿಗಳಾದ ಸವಿತ ಸಮಾಜದ ದರೂರ್ ಕೇಶವಪ್ಪನವರ ಮೊಮ್ಮಗ ಹಾಗೂ ದರೂರ್ ಕೃಷ್ಣಪ್ಪನವರ ಮಗ ದರೂರ್ ಶ್ರೀನಿವಾಸ ಕಟ್ಟಿಮನಿ (47) ಇವರು ದಿನಾಂಕ 12.6.2023ರ ಸೋಮವಾರ ರಾತ್ರಿ 9ಕ್ಕೆ ನಿಧನರಾದರು. ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.6.2023ರ ಮಂಗಳವಾರ ಮಧಾಹ್ನ 12 ಕ್ಕೆ ದಾವಣಗೆರೆ ನಗರದ ಕೈಗಾರಿಕಾ ಪ್ರದೇಶದ ಎಸ್.ಓ.ಜಿ. ಕಾಲೋನಿ ಬಳಿ ಇರುವ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.




**ದೇವರ ಬೆಳಕೆರೆ ಹಾಲಪ್ಪ ನಿಧನ**



ಹರಿಹರ ತಾಲ್ಲೂಕು ದೇವರಬೆಳಕೆರೆ ಗ್ರಾಮದ ಶಾಮನೂರು ವಾಸಿ
ನಿವೃತ್ತ ಪ್ರ.ದ.ಸ. ಖಜಾನೆ ಇಲಾಖೆ (ದಾವಣಗೆರೆ ತಾಲ್ಲೂಕು ಪಂಚಾಯತಿ)
**ಶ್ರೀ ಎನ್.ಹಾಲಪ್ಪ (69)**
ಇವರು ದಿನಾಂಕ 12.06.2023ರ ಸೋಮವಾರ ರಾತ್ರಿ 11ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸಹೋದರ, ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.06.2023ರ ಮಂಗಳವಾರ ಮಧ್ಯಾಹ್ನ 2 ಕ್ಕೆ ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು ದೇವರಬೆಳಕೆರೆ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ : ಶ್ರೀಮತಿ ಪಾಲಾಕ್ಷಮ್ಮ ಹಾಲಪ್ಪ ಮತ್ತು ಮಕ್ಕಳು
ಎಚ್.ಎನ್. ಪರಮೇಶ್ವರಪ್ಪ ಹುಂಬಿ, ದೇವರಬೇಳಕೆರೆ.
ಶ್ಯಾನಭೋಗರು ವಂಶಸ್ಥರು. ಮೊ : 9986364171



**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ಶ್ರೀ ಕೆ.ಎಸ್.ಚಂದ್ರಶೇಖರ್ ಮತ್ತು ಸಹೋದರರು
ಕಾಶೀಪುರ ಗ್ರಾಮ, ದಾವಣಗೆರೆ ಜಿಲ್ಲೆ
ಇವರು ಮಾಡುವ ವಿಜ್ಞಾಪನೆಗಳು.
ದಿ.: 5.6.2023ನೇ ಸೋಮವಾರ ಬೆಳಿಗ್ಗೆ 9.11 ಕ್ಕೆ
ನಮ್ಮ ಪೂಜ್ಯ ತಂದೆಯವರಾದ
**ಶ್ರೀ ಗೌಡ್ರು ಷಡಾಕ್ಷರಪ್ಪನವರು**
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು** ದಿನಾಂಕ 13.6.2023ನೇ ಮಂಗಳವಾರ ಬೆಳಿಗ್ಗೆ 10.30 ಕ್ಕೆ ಕಾಶೀಪುರ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ದಿ. ಗೌಡ್ರು ಷಡಾಕ್ಷರಪ್ಪನವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಗೌಡ್ರು ಸಣ್ಣ ನಂಜಪ್ಪ ವಂಶಸ್ಥರು, ಬಂಧುಗಳು-ಮಿತ್ರರು. ಮೊ : 90368 38345, 99865 16437
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಆರ್ಯ-ಈಡಿಗರ ಮಹಿಳಾ ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

ದಾವಣಗೆರೆ,ಜೂ.12- ಸ್ಥಳೀಯ ವಿನೋಬನಗರ ಪಿ.ಬಿ. ರಸ್ತೆಯಲ್ಲಿರುವ ಆರ್ಯ-ಈಡಿಗರ ಸಮಾಜದ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ದಾವಣಗೆರೆ ಜಿಲ್ಲಾ ಆರ್ಯ - ಈಡಿಗರ ಸಂಘದ ಅಧ್ಯಕ್ಷ ಹೆಚ್. ಶಂಕರ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

2023-24ನೇ ಸಾಲಿನಲ್ಲಿ ಪಿಯುಸಿ, ಪದವಿ,ಇಂಜಿನಿಯರಿಂಗ್ ಪದವಿ, ಸ್ನಾತಕೋತ್ತರ ಪದವಿ ಅಭ್ಯಾಸ ಮಾಡುತ್ತಿರುವ ಆರ್ಯ-ಈಡಿಗರ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಆಸಕ್ತ ವಿದ್ಯಾರ್ಥಿನಿಲಯರು ಇದೇ ದಿನಾಂಕ 30ರೊಳಗೆ ವಿದ್ಯಾರ್ಥಿ ನಿಲಯದಲ್ಲಿ ಅರ್ಜಿ ಪಡೆದು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬಹುದು. ವಿವರಕ್ಕೆ ದೂರವಾಣಿ 08192-254261 ಅಥವಾ ಮೊಬೈಲ್ ಸಂಖ್ಯೆ 88922-66468 ಅಥವಾ 98453-55008ರಲ್ಲಿ ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು ಎಂದು ಸಂಘದ ಕಾರ್ಯದರ್ಶಿ ಎ. ನಾಗರಾಜ್ ತಿಳಿಸಿದ್ದಾರೆ.

# ನಂದಿ ಸೌಹಾರ್ದ ಸಹಕಾರಿ ಅಧ್ಯಕ್ಷರಾಗಿ ಹಳ್ಳಿಹಾಳ್ ಹೆಚ್.ಟಿ. ಶಾಂತನಗೌಡ್ರು



ಮಲೇಬೆನ್ನೂರು, ಜೂ.12- ಇಲ್ಲಿನ ಪ್ರತಿಷ್ಠಿತ ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತದ ನೂತನ ಅಧ್ಯಕ್ಷರಾಗಿ ಹಳ್ಳಿಹಾಳ್ ಹೆಚ್.ಟಿ. ಶಾಂತನಗೌಡ್ರು ಮತ್ತು ಉಪಾಧ್ಯಕ್ಷರಾಗಿ ಜಿಗಳಿಯ ಎಂ.ವಿ.ನಾಗರಾಜ್ ಅವರು ಸೋಮವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜಿಗಳಿಯ ಇಂದೂಧರ್ ಮತ್ತು ಹಿಂಡಸಘಟ್ಟೆಯ ಶ್ರೀಮತಿ ಸೌಭಾಗ್ಯ ಉದಯಕುಮಾರ್ ಅವರುಗಳ ರಾಜೀನಾಮೆಯಿಂದಾಗಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳು ತೆರವಾಗಿದ್ದವು.

ಲೆಕ್ಕ ಪರಿಶೋಧನಾ ಇಲಾಖೆಯ ಹಿರಿಯ ಲೆಕ್ಕ ಪರಿಶೋಧಕ ಮಂಜುನಾಥ ಸ್ವಾಮಿ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

## ಉಪಾಧ್ಯಕ್ಷರಾಗಿ ಜಿಗಳಿಯ ಎಂ.ವಿ.ನಾಗರಾಜ್ ಆಯ್ಕೆ

ಸಹಕಾರಿಯ ನಿರ್ದೇಶಕರಾದ ಜಿಗಳಿಯ ಎನ್.ಆರ್.ಇಂದೂಧರ್, ಗೌಡ್ರ ಬಸವರಾಜಪ್ಪ, ಹಿಂಡಸಘಟ್ಟೆಯ ಸೌಭಾಗ್ಯ ಉದಯಕುಮಾರ್, ಹಳ್ಳಿಹಾಳ ಹೆಚ್.ವೀರನಗೌಡ, ಹೆಚ್.ಟಿ. ಪರಮೇಶ್ವರಪ್ಪ, ಎ.ಕೆ.ತಿಪ್ಪೇಶಪ್ಪ, ಕೊಕ್ಕನೂರಿನ ಕೆ.ಪಿ.ಆಂಜನೇಯ ಪಾಟೀಲ್, ಬಿ.ಹೆಚ್.ರವಿ, ಟಿ.ರಾಜು ಚಂದ್ರಪ್ಪ, ಜಿ.ಬೇವಿನಹಳ್ಳಿಯ ಶ್ರೀಮತಿ ಶೋಭಾ ಬಿ.ಪಿ.ಪಾಲಾಕ್ಷಪ್ಪ, ಸಂತೋಷ್ ಪಾಳ್ಯದ್, ಮಲೇಬೆನ್ನೂರಿನ ಎ.ಆರೀಫ್ ಅಲಿ, ಸಹಕಾರಿಯ ಸಿಇಓ ಬಸವರಾಜಪ್ಪ ಈ ವೇಳೆ ಹಾಜರಿದ್ದರು.

# ನೇಮಕ ರದ್ದು : ತೀರ್ಪಿನ ವಿರುದ್ಧ ಮೇಲ್ಮನವಿ ಅಗತ್ಯವಿಲ್ಲ

**(1ನೇ ಪುಟದಿಂದ)** ಮತ್ತು ಭಕ್ತರು, ಹೈಕೋರ್ಟ್ ಮೆಟ್ಟಿಲೇರಿದ್ದರು. ಸಂವಿಧಾನದ 162ನೇ ವಿಧಿಯ ಅನುಸಾರ ಮಠಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಸಂವಿಧಾನ ಬಾಹಿರ. ಅಂತೆಯೇ, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ-1988ರ ಕಲಂ 8 (2)ರಡಿ ಶರಣರು ತಮ್ಮ ಅಧಿಕಾರ ಚಲಾಯಿಸಲು ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯ ನಿರ್ಬಂಧ ವಿಧಿಸಿರುವುದು ಕಾನೂನು ಬಾಹಿರವಾದ್ದರಿಂದ, ಈ ಆದೇಶಗಳನ್ನು ವಜಾಗೊಳಿಸಬೇಕು ಎಂದು ಪ್ರತ್ಯೇಕವಾಗಿ ಕೋರಿದ್ದರು.

ಈ ಎರಡೂ ರಿಟ್ ಅರ್ಜಿಗಳನ್ನು ಒಟ್ಟಿಗೇ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ್ದ ಕ್ರಮವನ್ನು ರದ್ದುಪಡಿಸಿತ್ತು. ಅಂತೆಯೇ, ಚಿತ್ರದುರ್ಗ ಜಿಲ್ಲಾ ಹೆಚ್ಚುವರಿ ಸೆಷನ್ಸ್ ಕೋರ್ಟ್ ಆದೇಶವನ್ನೂ ವಜಾಗೊಳಿಸಿ, ಮಠ, ಮಾನ್ಯಗಳಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲದು ಎಂಬ ಖಂಡತುಂಡ ಅಭಿಪ್ರಾಯ ವ್ಯಕ್ತಪಡಿಸಿತ್ತು.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಕಾಯ್ದೆ 1997ಕ್ಕೆ ರಾಜ್ಯ ಸರ್ಕಾರ 2011ರಲ್ಲೇ ತಿದ್ದುಪಡಿ ತಂದಿದೆ. ಈ ತಿದ್ದುಪಡಿಯ ಅನುಸಾರ ಯಾವುದೇ ಮಠ, ಮಠಕ್ಕೆ ಹೊಂದಿಕೊಂಡ ದೇಗುಲಗಳನ್ನು ಶಾಸನದಿಂದ ಹೊರಗಿಡಲಾಗಿದೆ.

ಈ ಕುರಿತ ತಿದ್ದುಪಡಿಯನ್ನು ಸುಪ್ರೀಂ ಕೋರ್ಟಿಗೂ ಸಲ್ಲಿಸಲಾಗಿದೆ ಎಂಬ ಅಂಶವನ್ನು ತೀರ್ಪಿನಲ್ಲಿ ಕಾಣಿಸಿದ್ದ ನ್ಯಾಯಪೀಠ, ಸರ್ಕಾರವು ಮಠದ ವಿಷಯಗಳಲ್ಲಿ ಮಧ್ಯ ಪ್ರವೇಶಿಸಲು ಬರುವುದಿಲ್ಲ. ಶಾಸನಯುಕ್ತ ಅಧಿಕಾರ ಇದ್ದರೆ ಮಾತ್ರವೇ ಮಧ್ಯಪ್ರವೇಶ ಮಾಡಬಹುದು ಎಂದು ಹೇಳಿತ್ತು.

ಏತನ್ಮಧ್ಯೆ, ರಾಜ್ಯ ಸರ್ಕಾರವು ಏಕಸದಸ್ಯ ನ್ಯಾಯಪೀಠದ ಈ ಎರಡೂ ಅದೇಶಗಳನ್ನು ಮೇಲ್ಮನವಿ ಮೂಲಕ ಪ್ರಶ್ನಿಸಲಿದೆ ಎಂದು ಭಕ್ತರ ವಲಯದಲ್ಲಿ ಗುಲ್ಲೆದ್ದಿತ್ತು. ಆದರೆ, ಇದೀಗ ರಾಜ್ಯ ಅಡ್ವೋಕೇಟ್ ಜನರಲ್ ಕಚೇರಿಯು ಸರ್ಕಾರಕ್ಕೆ ತನ್ನ ಖಚಿತ ಕಾನೂನು ಅಭಿಪ್ರಾಯ ರವಾನಿಸಿದ್ದು, ಏಕಸದಸ್ಯ ನ್ಯಾಯಪೀಠದ ಆದೇಶ ಸೂಕ್ತವಾಗಿದೆ.

ಈ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸುವ ಯಾವುದೇ ಅವಶ್ಯಕತೆ ಇಲ್ಲ ಎಂದಿದೆ. ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಶಿವಮೂರ್ತಿ ಶರಣರನ್ನು ಪೊಲೀಸರು 2022ರ ಸೆಪ್ಟೆಂಬರ್ 1ರಂದು ಬಂಧಿಸಿದ್ದು, ಅಂದಿನಿಂದಲೂ ಅವರು ಚಿತ್ರದುರ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಅಂತೆಯೇ ಅವರ ವಿರುದ್ಧ ಪೋಕ್ಸೋ, ಅತ್ಯಾಚಾರ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ಗುರುತರ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ.


**ಮಲ್ಲಿಕಾರ್ಜುನ್ ಪಿ. ಮಾಗಾನಹಳ್ಳಿ ನಿಧನ**

ದಾವಣಗೆರೆ ಸಿಟಿ ವಾಸಿ
**ಶ್ರೀ ಮಲ್ಲಿಕಾರ್ಜುನ್ ಪಿ. ಮಾಗಾನಹಳ್ಳಿ**
ಅವರು ದಿನಾಂಕ 12-06-2023ರ ಸೋಮವಾರ ರಾತ್ರಿ 8.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 52 ವರ್ಷ ವಯಸ್ಸಾಗಿತ್ತು.
ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.
ದಿನಾಂಕ 13-06-2023ರ ಮಂಗಳವಾರ ಬೆಳಿಗ್ಗೆ 10.30 ರಿಂದ 11.30 ರವರೆಗೆ ಶಾಮನೂರಿನ ಹಿಂದೂ ರುದ್ರಭೂಮಿಯಲ್ಲಿ ಮೃತರ ಅಂತಿಮ ದರ್ಶನದ ನಂತರ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.
ಇಂತಿ ದುಃಖತಪ್ತರು, ಬಂಧುಗಳು-ಆತ್ಮೀಯ ಮಿತ್ರರು.
ಮೊ. : 86602 80677, 98450 29032




# 15 ವರ್ಷಗಳಲ್ಲಿ ಮೊದಲ ಬಾರಿಗೆ ಗೋಧಿ ದಾಸ್ತಾನು ನಿರ್ಬಂಧ

ನವದೆಹಲಿ, ಜೂ. 12 – ಕೇಂದ್ರ ಸರ್ಕಾರ ಕಳೆದ 15 ವರ್ಷಗಳಲ್ಲಿ ಮೊದಲ ಬಾರಿ ಗೋಧಿಯ ಸಂಗ್ರಹದ ಮೇಲೆ ಮಿತಿ ಹೇರಿದೆ. ಈ ನಿರ್ಬಂಧ ಮಾರ್ಚ್ 2024ರವರೆಗೆ ಜಾರಿಯಲ್ಲಿರಲಿದೆ. ಗೋಧಿ ಬೆಲೆ ಏರಿಕೆ ತಡೆಯುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಈ ತಿಂಗಳ ಅಂತ್ಯದೊಳಗೆ ಮುಕ್ತ ಮಾರುಕಟ್ಟೆಗೆ 15 ಲಕ್ಷ ಗೋಧಿ ಬಿಡುಗಡೆ ಮಾಡಲೂ ಸಹ ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದೇ ವೇಳೆ ಅಕ್ಕಿಯನ್ನೂ ಸಹ ಸಗಟು ಮಾರಾಟಗಾರರಿಗೆ ಬಿಡುಗಡೆ ಮಾಡಲಾಗುವುದು.

ಈ ಹಿಂದೆ 2008ರಲ್ಲಿ ಕೊನೆಯ ಬಾರಿಗೆ ಗೋಧಿ ಸಂಗ್ರಹದ ಮೇಲೆ ಮಿತಿ ಹೇರಲಾಗಿತ್ತು. ಕಳೆದ ತಿಂಗಳು ಗೋಧಿ ಬೆಲೆ ಶೇ.8ರಷ್ಟು ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಗೋಧಿ ದಾಸ್ತಾನಿನ ಮೇಲೆ ಮಿತಿ ಹೇರಲಾಗಿದೆ.

# ಸಂಸದರಿಂದ ಇಂದು ಸಾರ್ವಜನಿಕರ ಭೇಟಿ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಜಿಎಂಐಟಿ ಅತಿಥಿ ಗೃಹದಲ್ಲಿ ಇಂದು ಮತ್ತು ನಾಳೆ ಸಾರ್ವಜನಿಕರನ್ನು ಭೇಟಿ ಮಾಡಲಿದ್ದಾರೆ.

ಇಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30 ರವರೆಗೆ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 1.30 ರಿಂದ ಸಂಜೆ 4 ರವರೆಗೆ ಜಿಎಂಐಟಿ ಅತಿಥಿ ಗೃಹದಲ್ಲಿ ಸಾರ್ವಜನಿಕರನ್ನು ಭೇಟಿ ಯಾಗಲಿದ್ದಾರೆ. ನಾಳೆ ಬುಧವಾರ ಮಧ್ಯಾಹ್ನ 12 ರಿಂದ ಸಂಜೆ 4 ರವರೆಗೆ ಜಿಎಂಐಟಿ ಅತಿಥಿ ಗೃಹದಲ್ಲಿ ಸಾರ್ವಜನಿಕರನ್ನು ಭೇಟಿಯಾಗಲಿದ್ದಾರೆ.

# ರೋಲ್ ಬಾಲ್ ಲೀಗ್:ಸ್ಟಾರ್ ಸ್ಪೋರ್ಟ್ಸ್ ತಂಡ ಪ್ರಥಮ



ದಾವಣಗೆರೆ, ಜೂ.12- ಬೆಂಗಳೂರಿನ ಸ್ಕೇಟಿಂಗ್ ಅಕಾಡೆಮಿ ಮಲ್ಲಸಂದ್ರದಲ್ಲಿ ಪ್ರಥಮ ಕರ್ನಾಟಕ ರೋಲ್ ಬಾಲ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗಳನ್ನು ನಡೆಸಲಾಯಿತು. ಈ ಪಂದ್ಯಾವಳಿಗಳಲ್ಲಿ ಬೇರೆ ಬೇರೆ ಜಿಲ್ಲೆಗಳ ಎಂಟು ತಂಡಗಳು ಭಾಗವಹಿಸಿದ್ದವು.

ನಗರದ ಸ್ಟಾರ್ ಸ್ಪೋರ್ಟ್ಸ್ ತಂಡದ ಸಂಸ್ಥಾಪಕರಾದ ಶೈಲಾ ನೀಲ್‌ಕಾಂತ್ ಅವರು, ತಂಡವು ಪ್ರಥಮ ಸ್ಥಾನ ಪಡೆಯಲು ಸಂಪೂರ್ಣ ಪ್ರೋತ್ಸಾಹವನ್ನು, ಸಹಕಾರ ನೀಡಿದ್ದರು.

ದಾವಣಗೆರೆ ನಗರದ ತಂಡಕ್ಕೆ ಪೃಥ್ವಿಕಾಂತ್ ಕೊಟ್ಟಿಗಿ ಅವರು ತರಬೇತಿ ಹಾಗೂ ಸೂಕ್ತ ಮಾರ್ಗದರ್ಶನ ನೀಡಿದ್ದು, ಪ್ರಪ್ರಥಮವಾಗಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಬಂಗಾರದ ಮೆಡಲ್ ಲಭಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿರುತ್ತಾರೆ.

ಕರ್ನಾಟಕ ರಾಜ್ಯದ ರೋಲ್‌ಬಾಲ್ ಕಾರ್ಯದರ್ಶಿ ಗೋವಿಂದಯ್ಯ, ಅಧ್ಯಕ್ಷರಾದ ಜ್ಯೋತಿ ಚಂದಕ್, ಅಂತರರಾಷ್ಟ್ರೀಯ ಆಟಗಾರ ನಿಖಿಲ್ ಚಂದಕ್, ದಕ್ಷಿಣ ವಲಯದ ಕಾರ್ಯದರ್ಶಿ ಸುಬ್ರಹ್ಮಣ್ಯ ಮತ್ತು ದೇಶದ ರೋಲ್‌ಬಾಲ್ ಕಾರ್ಯದರ್ಶಿ ಚೇತನ್, ಈ ಆಟದ ಆವಿಷ್ಕಾರಿಗಳಾದ ರಾಜು ದೊಬಾಡೆ, ಜಿಲ್ಲಾ ಅಧ್ಯಕ್ಷರಾದ ಸುಮಾ, ವಿಜಯಕುಮಾರ್, ತರಬೇತುದಾರ ಪೃಥ್ವಿಕಾಂತ್, ನೀಲ್‌ಕಾಂತ್, ಆಕಾಶ್ ಸೇರಿದಂತೆ ಅಭಿಮಾನಿಗಳು ಶುಭಾಶಯ ಕೋರಿದ್ದಾರೆ.

# ನಕಲಿ ಆಭರಣ : ಮಹಿಳೆಗೆ ವಂಚನೆ

ದಾವಣಗೆರೆ, ಜೂ. 12- ಮಹಿಳೆಯೊಬ್ಬರಿಗೆ ನಕಲಿ ಬಂಗಾರದ ಆಭರಣಗಳನ್ನು ನೀಡಿ ವಂಚಿಸಿದ ಘಟನೆ ನಗರದ ರೈಲ್ವೇ ನಿಲ್ದಾಣದಲ್ಲಿ ನಡೆದಿದೆ.

ನಗರದ ಇಂಡಸ್ಟ್ರೀಯಲ್ ಏರಿಯಾದ ವಾಸಿ ಸುಮಾ ವಂಚನೆಗೊಳಗಾದ ಗೃಹಿಣಿ. ಇವರು ಗೃಹ ಬಳಕೆ ವಸ್ತುಗಳನ್ನು ಖರೀದಿಸಲು ಅಶೋಕ ರಸ್ತೆಯ ಗೇಟ್ ಬಳಿ ನಿಂತಿದ್ದಾಗ, 50 ವರ್ಷದ ಅಪರಿಚಿತ ಮಹಿಳೆಯೊಬ್ಬರು ಪರಿಚಯಿಸಿಕೊಂಡು, ತನ್ನಲ್ಲಿರುವ ಬಂಗಾರದ ಆಭರಣಗಳನ್ನು ಕಡಿಮೆ ಬೆಲೆಗೆ ನೀಡುವುದಾಗಿ ಹೇಳಿ ನಂಬಿಸಿದ್ದಾರೆ.

ಸುಮಾರು 3.50 ಲಕ್ಷ ರೂ ಬೆಲೆ ಬಾಳುವ ತನ್ನ ಆಭರಣಗಳನ್ನು ಕಡಿಮೆ ಬೆಲೆಗೆ ಕೊಡುವುದಾಗಿ ಹೇಳಿ, ಸುಮಾ ಅವರಿಂದ 80 ಸಾವಿರ ಬೆಲೆ ಬಾಳುವ 3 ಗ್ರಾಂ ಬಂಗಾರದ ಕಿವಿ ಓಲೆ ಹಾಗೂ 15 ಗ್ರಾಂ ತೂಕದ ಬಂಗಾರದ ಸರ ಹಾಗೂ 10 ಸಾವಿರ ರೂ. ನಗದು ಹಣ ಪಡೆದು, ನಕಲಿ ಆಭರಣಗಳನ್ನು ನೀಡಿ ವಂಚಿಸಿದ್ದಾರೆ. ಈ ಕುರಿತು ಬಸವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಬಸವ ತತ್ವ ಇಂದಿಗೂ ಎಂದೆಂದಿಗೂ ಪ್ರಸ್ತುತ

## ಶಿವಗೋಷ್ಠಿಯಲ್ಲಿ ಅಧ್ಯಾಪಕ ಹೆಚ್.ಎಸ್. ದ್ಯಾಮೇಶ್



ದಾವಣಗೆರೆ, ಜೂ. 12- ಜಾತಿ, ಮತ, ಲಿಂಗ ಅಸಮಾನತೆಯ ವಿರುದ್ಧ ಹೋರಾಡಿದ ಬಸವಣ್ಣನವರ ವಿಚಾರಧಾರೆಗಳು ಸಾರ್ವಕಾಲಿಕವಾದವು. ಬಸವ ತತ್ವವು ಇಂದಿಗೂ ಎಂದೆಂದಿಗೂ ಪ್ರಸ್ತುತ ಎಂದು ಅಧ್ಯಾಪಕ ಎಚ್. ಎಸ್. ದ್ಯಾಮೇಶ್ ಅಭಿಪ್ರಾಯಪಟ್ಟರು.

ಶನಿವಾರ ಸಂಜೆ ಮಾಗನೂರು ಬಸಪ್ಪ ಶಾಲೆಯ ಸಭಾಂಗಣದಲ್ಲಿ ಜರುಗಿದ ಶಿವಗೋಷ್ಠಿಯಲ್ಲಿ ಬಸವರಾಜ ಶಿವಪುರ ಅವರ ಸೇವಾ ಕಾರ್ಯಗಳ ಕುರಿತು ದ್ಯಾಮೇಶ್ ಮಾತನಾಡಿದರು.

ಬಸವರಾಜ ಶಿವಪುರ ಅವರು ತರಳಬಾಳು ಮಠದ ಪೂಜ್ಯರ ಬಸವ ತತ್ವ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದ ನಿಷ್ಠಾವಂತರು. ಅವರ ಬದ್ಧತೆ, ಪ್ರಾಮಾಣಿಕತೆ, ಸೇವಾಮನೋಭಾವ ಅನುಕರಣೀಯವಾದುದು ಎಂದು ದ್ಯಾಮೇಶ್ ತಿಳಿಸಿದರು.

ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ. ಎಚ್. ವಿ. ವಾಮದೇವಪ್ಪ ಮಾತನಾಡಿ, ಬಸವರಾಜ ಶಿವಪುರ ಅವರು ಕರಡು ತಿದ್ದುವುದರಲ್ಲಿ ನಿಪುಣರಾಗಿದ್ದರು. ಸಿರಿಗೆರೆ ಮಠದಿಂದ ಪ್ರಕಟವಾಗುವ ಪುಸ್ತಕಗಳಲ್ಲಿ ಮುದ್ರಣ ದೋಷಗಳಾಗದಂತೆ ನಿಗಾ ವಹಿಸುತ್ತಿದ್ದರು. ಅವರ ಶ್ರದ್ಧೆ ಇಂದಿನ ಜನಕ್ಕೆ ಆದರ್ಶ ಎಂದರು.

ಗೋಷ್ಠಿಯಲ್ಲಿ ಪ್ರಾಚೀನ ನಾಯನ್ಮಾರರನ್ನು ಕುರಿತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಕರಿಬಸಪ್ಪ ಚವಲಹಳ್ಳಿಯವರು ಉಪನ್ಯಾಸ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಮಾಗನೂರು ಸಂಗಮೇಶ ಗೌಡರು ಮಾತನಾಡಿ, ಪ್ರತಿ ತಿಂಗಳು ನಡೆಯುವ ಗೋಷ್ಠಿಯಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಬಹಿಸುವಂತಾಗಬೇಕು. ಇಂದಿನ ಒತ್ತಡದ ಜೀವನ ಶೈಲಿಯಲ್ಲಿ ಆಧ್ಯಾತ್ಮಿಕ ಚಿಂತನೆ ಎಲ್ಲರಿಗೂ ಅವಶ್ಯಕ ಎಂದರು.

ಪ್ರಾರಂಭದಲ್ಲಿ ಕದಳಿ ವೇದಿಕೆಯವರು ವಚನ ಗೀತೆ ಹಾಡಿದರು. ಶಿಕ್ಷಕ ಮಂಜುನಾಥ್ ಸ್ವಾಗತಿಸಿದರು. ಶಿಕ್ಷಕಿ ಅನಿತಾ ವಂದನೆ ಸಲ್ಲಿಸಿದರು. ಶಿಕ್ಷಕಿ ಪುಷ್ಪಾವತಿ ನಿರೂಪಿಸಿದರು. ಕಾರ್ಯಕ್ರಮದ ಲ್ಲಿ ನಿವೃತ್ತ ಪ್ರಾಚಾರ್ಯರುಗಳಾದ ಡಾ. ನಾ. ಲೋಕೇಶ ಒಡೆಯರ್, ಪ್ರೊ. ಎಚ್. ಎಸ್. ಶಾಂತವೀರಪ್ಪ, ಅಧ್ಯಾಪಕ ನಾಗರಾಜ ಸಿರಿಗೆರೆ, ನಾಗಪ್ಪ ಕ್ಯಾರಕಟ್ಟೆ ಮುಂತಾದವರು ಪಾಲ್ಗೊಂಡಿದ್ದರು.

# ಕುಣೆಬೆಳಕೆರೆಯಲ್ಲಿ ವಿಪತ್ತುಗಳ ನಿರ್ವಹಣೆ ಪ್ರಾತ್ಯಕ್ಷಿಕೆ



ದಾವಣಗೆರೆ, ಜೂ. 12- ದಾವಣಗೆರೆ ವಿಶ್ವವಿದ್ಯಾಲಯ ಮಾ.ಸ.ಬ ಕಲಾ ಮತ್ತು ವಾಣಿಜ್ಯ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಕುಣೆಬೆಳಕೆರೆ ಗ್ರಾಮದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರದಲ್ಲಿ ಅಗ್ನಿಶಮನ ಮುನ್ನೆಚ್ಚರಿಕೆ ಹಾಗೂ ವಿಪತ್ತುಗಳ ನಿರ್ವಹಣೆಗಳ ಬಗ್ಗೆ ಪ್ರಾತ್ಯಕ್ಷಿತೆ ಮತ್ತು ಅಣುಕು ಪ್ರದರ್ಶನ ಕಾರ್ಯಕ್ರಮ ನೆರವೇರಿಸಲಾಯಿತು. ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ದಾವಣಗೆರೆ ಇವರ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೀಡ್ ಫೈರ್ ಮ್ಯಾನ್ ಮೊಹಮ್ಮದ್ ರಫೀಕ್ ಮತ್ತು ಸಿಬ್ಬಂದಿ ವರ್ಗದವರು ಹಾಗೂ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಆರ್. ರಾಘವೇಂದ್ರ, ಡಾ. ಪ್ರವೀಣ್ ಕುಮಾರ್, ಪ್ರೊ. ಪರಮೇಶಿ, ಪ್ರೊ. ಶಾಂತಕುಮಾರ್, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕೈ ಹಿಡಿದ ಖಾತ್ರಿ

**(1ನೇ ಪುಟದಿಂದ)** ಗ್ರಾಮದ ಶಿವರಾಜ್. ಮಳೆಗಾಲವಾಗಿದ್ದರೂ ಸಹ ತಾಲೂಕಿನಲ್ಲಿ ಎಲ್ಲಾ ಪಂಚಾಯತಿಗಳ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಕಾಮಗಾರಿಗಳು ಸಮರ್ಪಕವಾಗಿ ನಡೆಯುತ್ತಿದ್ದು, ಇವರಿಗೆ 2.44 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿವೆ ಎಂದು ಕಾರ್ಯನಿರ್ವಾಹಕ ಅಧಿಕಾರಿ (ಪ್ರಭಾರ) ವೈ.ಎಚ್.ಚಂದ್ರಶೇಖರ್ ತಿಳಿಸಿದರು.

# ಮಾಯಕೊಂಡದಲ್ಲಿ ಅಹವಾಲು ಆಲಿಸಿದ ಶಾಸಕ ಬಸವಂತಪ್ಪ



ಮಾಯಕೊಂಡ, ಜೂ. 12- ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಶಾಸಕ ಕೆ.ಎಸ್. ಬಸವಂತಪ್ಪ ಭೇಟಿ ನೀಡಿ, ಮತದಾರರಿಗೆ ಕೃತಜ್ಞತೆ ಸಲ್ಲಿಸಿ, ಅಹವಾಲು ಆಲಿಸಿದರು.

ಕ್ಷೇತ್ರದ ಮತದಾರರನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸುವುದನ್ನು ಮುಂದುವರೆಸಿರುವ ಮಾಯ ಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಅಭಿನಂದನೆ ಸಲ್ಲಿಸುವ ಜೊತೆಗೆ ಅವರ ಸಮಸ್ಯೆಗಳನ್ನು ಆಲಿಸುವ ಮೂಲಕ ಸಮಸ್ಯೆ ಪರಿಹರಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಹಿಂಡಸಕಟ್ಟೆ, ಅಣಬೇರು, ನಲ್ಕುಂದ, ಎಚ್.ಬಸಾಪುರ, ಕ್ಯಾತನಹಳ್ಳಿ, ಹುಚ್ಚವ್ವನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸುವ ಮೂಲಕ ಅವರ ಸಮಸ್ಯೆಗಳನ್ನು ಆಲಿಸುತ್ತಾ ಸ್ಥಳದಲ್ಲೇ ಪರಿಹಾರ ನೀಡುವ ಕೆಲಸದಲ್ಲಿ ತೊಡಗಿದ್ದಾರೆ.

ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮಸ್ಥರು ಅಹವಾಲುಗಳನ್ನು ಸಲ್ಲಿಸುತ್ತಿದ್ದು, ತ್ವರಿತವಾಗಿ ಬಗೆಹರಿಯುವ ಅಹವಾಲುಗಳಿದ್ದರೆ, ಸ್ಥಳದಲ್ಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿ ಪರಿಹರಿಸುತ್ತಿದ್ದಾರೆ. ಬಗೆಹರಿಯದ ಸಮಸ್ಯೆಗಳಿದ್ದರೆ ಅವುಗಳನ್ನು ಕಾಲಮಿತಿಯಲ್ಲಿ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡುತ್ತಿದ್ದಾರೆ. ಕೆಲವು ಗ್ರಾಮಗಳಿಗೆ ಭೇಟಿ ನೀಡಿದಾಗ ರೈತರು ವಿದ್ಯುತ್ ಸಮಸ್ಯೆ ಕುರಿತು ಅಹವಾಲು ಸಲ್ಲಿಸಿದರೆ, ಬಸ್ ಸೌಲಭ್ಯ ಇಲ್ಲದಿರುವ ಗ್ರಾಮಗಳಿಗೆ ಬಸ್ ಸೌಲಭ್ಯ ಕಲ್ಪಿಸುವಂತೆ ಗ್ರಾಮಸ್ಥರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾಯಕೊಂಡ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಹನುಮಂತಪ್ಪ, ಜಿಪಂ ಮಾಜಿ ಸದಸ್ಯ ವೆಂಕಟೇಶ್, ಕಾಂಗ್ರೆಸ್ ಮುಖಂಡ ಮಾದಪ್ಪ, ಬಾಡದ ರುದ್ರಸ್ವಾಮಿ, ಆರ್.ಜಿ.ಹಳ್ಳಿ ಮಲ್ಲಿಕಣ್ಣ, ಮಾಯಕೊಂಡ ರುದ್ರೇಶ್, ಹೆದ್ನೆ ರಾಜೇಂದ್ರಣ್ಣ, ಮಾಯಕೊಂಡ ಗೋಪಾಲಣ್ಣ ಸೇರಿದಂತೆ ಕಾಂಗ್ರೆಸ್ ಮುಖಂಡರು ಇದ್ದರು.

# ಜಿ.ಎಂ. ಸೌಹಾರ್ದ ಸಂಘ : 500 ಕೋಟಿ ರೂ. ಠೇವಣಿ ಗುರಿ



ದಾವಣಗೆರೆ, ಜೂ. 12- ನಗರದ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ ನಡೆದ ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಜಿ.ಎಂ. ಪ್ರಸನ್ನಕುಮಾರ್ ಅವರು ಸದಸ್ಯರಿಗೆ ಮುಂಬರುವ 5 ವರ್ಷಗಳಲ್ಲಿ 500 ಕೋಟಿ ಠೇವಣಿ ಸಂಗ್ರಹಣೆಯ ಗುರಿ ಹೊಂದುವ ಸಂಕಲ್ಪ ಹೊಂದಿದೆ ಎಂದರು.

2022-23ನೇ ಸಾಲಿನ ಅಂತ್ಯಕ್ಕೆ ನಮ್ಮ ಸಹಕಾರಿಯು ಈಗಾಗಲೇ 202.74 ಕೋಟಿ ರೂ.ಗಳ ಠೇವಣಿ ಸಂಗ್ರಹಿಸಿದ್ದು, 173.32 ಕೋಟಿ ರೂ.ಗಳ ಸಾಲ ವಿತರಿಸಿದ್ದೇವೆ. 3.6 ಕೋಟಿ ರೂ.ಗಳ ಲಾಭ ಗಳಿಸಿದೆ ಎಂದು ತಿಳಿಸಲು ಹರ್ಷ ವ್ಯಕ್ತಪಡಿಸಿದರು.

ಎಲ್ಲಾ ಸದಸ್ಯರ ಸಹಕಾರದಿಂದ ಈ ಪ್ರಗತಿ ಸಾಧಿಸಲು ಸಾಧ್ಯವಾಯಿತು ಎಂದರು. ಸಹಕಾರ ಸಂಘದ ಮೇಲೆ ಇಟ್ಟಿರುವ ನಂಬಿಕೆ ಹಾಗೂ ವಿಶ್ವಾಸಪೂರ್ವಕ ನಡೆ ಮುಖ್ಯ ಕಾರಣ ಎಂದು ಸ್ಮರಿಸಿದರು.

ಕೋವಿಡ್ ಸಂದರ್ಭದಲ್ಲಿ ಶೇ.12 ಡಿವಿಡೆಂಟ್ ವಿತರಣೆ ಮಾಡಿದ್ದೇವೆ. ಇದಕ್ಕೆ ಮುಖ್ಯ ಕಾರಣ ಸದಸ್ಯರ ಹಿತರಕ್ಷಣೆ ಹಾಗೂ ಆದ್ಯತೆಯ ಮೇರೆಗೆ ಡಿವಿಡೆಂಡ ವಿತರಿಸಿದ್ದೇವೆ. ಮುಂದಿನ ದಿನಗಳಲ್ಲಿ ಸಹಕಾರಿಯ ಕೇಂದ್ರಕ್ಕೆ ಪಿ.ಬಿ.ರಸ್ತೆಯಲ್ಲಿ ಒಂದು ಯೋಗ್ಯ ನಿವೇಶನ ಖರೀದಿಸುವ ಬಗ್ಗೆ ನಿರ್ಧಾರ ತೆಗೆದುಕೊಂಡಿರುವ ಸುಳಿವು ನೀಡಿದರು.

ಸಂಘದ ಉಪಾಧ್ಯಕ್ಷರಾದ ಪ್ರಭುದೇವ್ ಮಾತನಾಡಿ, ಸಂಘದ ಮುಂದಿನ ನಡೆಯ ಬಗ್ಗೆ ಸ್ಥೂಲ ಪರಿಚಯ ಒದಗಿಸಿದರು. ವೇದಿಕೆಯಲ್ಲಿ ಹಿರಿಯ ನಿರ್ದೇಶಕರಾದ ಜಿ.ಆರ್. ನೀಲಕಂಠಪ್ಪ, ಎ.ಎಸ್.ಗುರುಮೂರ್ತಿ, ಟಿ. ಅರುಣಕುಮಾರ್, ಕೆ.ಎಸ್. ವಿಜಯಕುಮಾರ್, ಎ.ಸಿ.ಬಸವರಾಜ್, ಶರತ್ ಪಾಟೀಲ್, ಬಿ.ಎಸ್.ರವೀಂದ್ರ, ಎ.ಬಿ. ಸಿದ್ದನಗೌಡ, ಮಹಿಳಾ ನಿರ್ದೇಶಕರಾದ ವೈ.ಎಸ್.ಗಾಯತ್ರಿ ಸುಭಾಷ್‌ಚಂದ್ರ, ಪ್ರಮೀಳ ನಟರಾಜ್, ಸಹಕಾರಿಯ ಪ್ರಧಾನ ವ್ಯವಸ್ಥಾಪಕ ಎಸ್.ಎನ್. ಮಲ್ಲಪ್ಪ, ಸಹಕಾರಿಯ ವಿಶೇಷ ಸಲಹೆಗಾರರಾದ ಎಸ್.ಸಿ.ಮಹಾರುದ್ರಪ್ಪ, ಸೇರಿದಂತೆ ಎಲ್ಲಾ ಸದಸ್ಯರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಹೊಸ ಮನೆ, ಬಾಡಿಗೆ ಮನೆಗೆ 58 ಯೂನಿಟ್ ವಿದ್ಯುತ್ ಫ್ರೀ

**(1ನೇ ಪುಟದಿಂದ)** ಪರಿಶೀಲಿಸಿದ ಬಳಿಕ ಕೆಇಆರ್‌ಸಿ ಪರಿಷ್ಕರಣೆ ಮಾಡಲಿದೆ ಎಂದರು.

ಈಗ ಪರಿಷ್ಕರಣೆಯಾಗಿರುವ ದರದ ಬಗ್ಗೆ ಕೆಇಆರ್ ಸಿಗೆ ಮನವಿ ಮಾಡುವ ಬಗ್ಗೆ ಉಂಟಾಗುವ ಸಾಧಕ-ಬಾಧಕಗಳ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ನಮ್ಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೂಚಿಸಿರುವುದಾಗಿ ಹೇಳಿದರು.

# ಹರಿಹರದಲ್ಲಿ ಬಾಲ ಕಾರ್ಮಿಕ ವಿರೋಧಿ ದಿನ



ಹರಿಹರ,ಜು, 12- ಬಾಲಕಾರ್ಮಿಕ ಪದ್ದತಿ ಕೊನೆಗಾಣಿಸಬೇಕೆಂಬ ಬೇಡಿಕೆಯನ್ನು ಬೆಂಬಲಿಸಲು ಮತ್ತು ತೀವ್ರಗೊಳಿಸಲು 'ಬಾಲ ಕಾರ್ಮಿಕ ವಿರೋಧಿ ದಿನ'ವನ್ನು ಆಚರಿಸಲಾಗುತ್ತಿದೆ ಎಂದು ಯಶಸ್ವಿ ಕಿರಣ ಸೇವಾ ಸಂಸ್ಥೆ ಅಧ್ಯಕ್ಷ ಶಶಿನಾಯ್ಕ್ ತಿಳಿಸಿದರು. ಇಲ್ಲಿನ ಬೆಂಕಿನಗರದ ಯಶಸ್ವಿ ಕಿರಣ ಸೇವಾ ಸಂಸ್ಥೆ ಆವರಣದಲ್ಲಿ ನಡೆದ ವಿಶ್ವ ಬಾಲ ಕಾರ್ಮಿಕರ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, 1987ರಿಂದ ರಾಷ್ಟ್ರೀಯ ಬಾಲಕಾರ್ಮಿಕ ನೀತಿಯನ್ನು ಜಾರಿಗೆ ತಂದಿದೆ, 14 ವರ್ಷದ ಒಳಗಿನ ಮಕ್ಕಳು ಯಾರೂ ಕೆಲಸಕ್ಕೆ ಹೋಗದೆ ಶಾಲೆಗೆ ಹೋಗಬೇಕು. ಎಲ್ಲಾ ಕಾರ್ಮಿಕರು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರೇಮಾನಂದ, ಹನುಮಂತಪ್ಪ, ಮುಬಾರಕ್, ನಾಗರಾಜ, ಭಾಷಾ ಸಾಬ್ ಮತ್ತಿತರು ಉಪಸ್ಥಿತರಿದ್ದರು.

# ಯೋಗ ಆರೋಗ್ಯಕ್ಕೆ, ಮಾನವೀಯ ಮೌಲ್ಯಗಳಿಗೆ ಪೂರಕ



ದಾವಣಗೆರೆ, ಜೂ.12- ಯೋಗಾಸನ ಕೇವಲ ಆರೋಗ್ಯಕ್ಕೆ ಸೀಮಿತವಾಗದೆ, ನಮ್ಮ ಜೀವನದ ಅಭಿವೃದ್ಧಿಗೆ, ಮಾನವೀಯ ಮೌಲ್ಯಗಳಿಗೆ ಪೂರಕವಾಗುತ್ತದೆ. ಇಂದಿನ ದಿನಮಾನಗಳಲ್ಲಿ ನಮ್ಮ ಸಂಸ್ಕೃತಿ, ಸಂಸ್ಕಾರ, ಸಭ್ಯತೆಗಳು ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಮರೆಯಾಗುತ್ತಿರುವುದು ವಿಷಾದದ ಸಂಗತಿ. ನಮ್ಮ ಸಂಸ್ಕೃತಿಗಳನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಕಳೆದ ಮೂರುವರೆ ದಶಕಗಳಿಂದ ನಿರಂತರವಾಗಿ, ಕ್ರಿಯಾಶೀಲವಾಗಿ ಚಟುವಟಿಕೆಗಳ ಸಾಧನೆಯ ಈ ಕಲಾಕುಂಚ ಸಂಸ್ಥೆಯ ಕಾಯಕ ಇತರೆ ಸಂಸ್ಥೆಗಳಿಗೆ ಮಾದರಿ ಮತ್ತು ಶ್ಲಾಘನೀಯ ಕಾರ್ಯ ಎಂದು ಶ್ರೀ ಪತಂಜಲಿ ಯೋಗ ಉಪಾಧ್ಯಕ್ಷ ಎಸ್.ಹೆಚ್. ಕಲ್ಲೇಶ್ ತಮ್ಮ ಮನದಾಳದ ಮಾತು ಹಂಚಿಕೊಂಡರು.

ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಿದ್ದವೀರಪ್ಪ ಬಡಾವಣೆ ಶಾಖೆಯ ಆಶ್ರಯದಲ್ಲಿ ಸಿದ್ಧವೀರಪ್ಪ ಬಡಾವಣೆಯ ಶ್ರೀ ಗಣೇಶ ನಿಲಯ ಸಭಾಂಗಣದಲ್ಲಿ ನಿನ್ನೆ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಉಚಿತ ಯೋಗ ತರಬೇತಿ ಶಿಬಿರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಅವರು ಉದ್ಘಾಟಿಸಿ, ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದ ಶ್ರೀ ಪತಂಜಲಿ ಯೋಗ ಸಮಿತಿಯ ಸಂಚಾಲಕ ಟಿ.ವಿ.ವಿ. ಸತೀಶ್, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ಮಾತನಾಡಿದರು.

ಕಲಾಕುಂಚ ಸಿದ್ದವೀರಪ್ಪ ಬಡಾವಣೆ ಶಾಖೆಯ ಅಧ್ಯಕ್ಷರಾದ ಶ್ರೀಮತಿ ಲಲಿತಾ ಕಲ್ಲೇಶ್ ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಸಂಧ್ಯಾ ಶ್ರೀನಿವಾಸ್, ಸುಚಿತ್ರಾ ಗಣೇಶ್‌ರಾವ್, ಉಮಾ ನಾಗರಾಜ್ ತಂಡದ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಈ ಸಮಾರಂಭಕ್ಕೆ ಶ್ರೀಮತಿ ಉಮಾ ಮಹೇಶ್ವರಿ ಸ್ವಾಗತಿಸಿದರು, ಯೋಗ ತರಬೇತಿ ಪಟುಗಳಾದ ಶ್ರೀಮತಿ ಲೀಲಾ ಸುಭಾಷ್, ಸಂಧ್ಯಾ ಶ್ರೀನಿವಾಸ್ ಉಪಸ್ಥಿತರಿದ್ದರು. ಶ್ರೀಮತಿ ಮಮತ ಕೊಟ್ರೇಶ್ ನಿರೂಪಿಸಿದರು. ಶ್ರೀಮತಿ ಸುಮಾ ಏಕಾಂತಪ್ಪ ವಂದಿಸಿದರು.

## ಬಜೆಟ್ ಗಾತ್ರ ಹೆಚ್ಚಳಕ್ಕೆ ಚಿಂತನೆ

**(1ನೇ ಪುಟದಿಂದ)** ಆರಂಭಿಸಲಿರುವ ಅವರು, ವಿವಿಧ ಇಲಾಖೆಗಳ ಪ್ರಮುಖರ ಜತೆ ಚರ್ಚೆ ನಡೆಸಲಿದ್ದಾರೆ.

ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ, ಯುವನಿಧಿ ಮತ್ತು ಅನ್ನಭಾಗ್ಯ ಯೋಜನೆಗಳಿಗೆ ಐವತ್ತು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣವನ್ನು ಹೊಂದಿಸಬೇಕಾದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನ ಬಜೆಟ್ ಗಾತ್ರವನ್ನು ಹಿಗ್ಗಿಸುವ ಅನಿವಾರ್ಯತೆ ರಾಜ್ಯ ಸರ್ಕಾರಕ್ಕೆ ಉಂಟಾಗಿದೆ.

ಉನ್ನತ ಮೂಲಗಳ ಪ್ರಕಾರ, ಇಂಧನ ಇಲಾಖೆಯಲ್ಲಿ ಸೋರಿಕೆ ತಡೆಗಟ್ಟುವುದು ಸೇರಿದಂತೆ ಆಡಳಿತದಲ್ಲಿನ ಲೋಪ-ದೋಷಗಳನ್ನು ಸರಿಪಡಿಸಿಕೊಳ್ಳುವುದು ಸೇರಿದಂತೆ ವಿವಿಧ ಬಾಬ್ತುಗಳ ಮೂಲಕ ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸುವುದು ಅವರ ಗುರಿ.

ಹಿಂದಿನ ಸರ್ಕಾರ ವೆಚ್ಚ ಮಾಡದೆ ಉಳಿಸಿರುವ ಹಣದ ಜತೆ ಅಬಕಾರಿ, ನೋಂದಣಿ ಮತ್ತು ಮುದ್ರಾಂಕದ ಬಾಬ್ತಿನಲ್ಲಿ ಹೆಚ್ಚುವರಿ ಹಣ ಹೊಂದಿಸುವ ಯೋಚನೆ ಇದೆ.

ಈ ಮಧ್ಯೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟರಿಗೆ ಮೀಸಲಾದ ಹಣದಲ್ಲಿ ಒಂದು ಪಾಲನ್ನು ಪಡೆದು ಅದೇ ಸಮುದಾಯಕ್ಕೆ ಭಾಗ್ಯಗಳನ್ನು ಒದಗಿಸಲು ಬಳಕೆ ಮಾಡುವ ಉದ್ದೇಶ ಹೊಂದಿದ್ದಾರೆ.

ಇದೇ ರೀತಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಕಳೆದ ಬಜೆಟ್‌ನಲ್ಲಿ ನಿಗದಿ ಮಾಡಲಾಗಿರುವ ಹಣದ ಪೈಕಿ ಒಂದಷ್ಟು ಪ್ರಮಾಣದಲ್ಲಿ ಕಡಿತ ಮಾಡುವುದು ಮತ್ತು ಈಗಾಗಲೇ ಘೋಷಣೆಯಾಗಿರುವ ಐದು ಭಾಗ್ಯಗಳಿಗೆ ಉಂಟಾಗುವ ಹಣದ ಕೊರತೆಯನ್ನು ನೀಗಿಸುವುದು ಅವರ ಸದ್ಯದ ಲೆಕ್ಕಾಚಾರವಾಗಿದೆ ಎಂದು ಮೂಲಗಳು ತಿಳಿಸಿವೆ.

## ಸರ್ಕಾರಿ ಬಸ್ ಬಾಗಿಲಿನಿಂದ ಬಿದ್ದು ವಿದ್ಯಾರ್ಥಿನಿಯ ಸಾವು

ಹಾವೇರಿ, ಜೂ. 12 – ಸರ್ಕಾರಿ ಬಸ್ ಬಾಗಿಲ ಬಳಿ ನಿಂತಿದ್ದ ವಿದ್ಯಾರ್ಥಿನಿ ಬಿದ್ದು ಸಾವನ್ನಪ್ಪಿದ ದುರ್ಘಟನೆ ಹಾವೇರಿಯಲ್ಲಿ ನಡೆದಿದೆ.

ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಕುಸನೂರು ಗ್ರಾಮದ ಬಳಿ ಈ ಘಟನೆ ನಡೆದಿದೆ. ಮಧು ಕುಂಬಾರ ಎಂಬ 14 ವರ್ಷದ ಬಾಲಕಿ ಸಾವನ್ನಪ್ಪಿರುವ ದುರ್ದೈವಿ. ಬಸ್‌ನಲ್ಲಿ ಜನ ತುಂಬಿದ್ದಾರೆಂದು ಬಸ್ ಬಾಗಿಲ ಬಳಿ ವಿದ್ಯಾರ್ಥಿನಿ ನಿಂತಿದ್ದಳು. ಈ ವೇಳೆ ಬಸ್ ತಿರುಗುವಾಗ ವಿದ್ಯಾರ್ಥಿನಿ ಮೇಲೆ ಹೆಚ್ಚಿನ ಜನರು ಭಾರ ಹಾಕಿದ್ದರಿಂದ ಬಾಲಕಿ ಆಯತಪ್ಪಿ ನೆಲಕ್ಕೆ ಬಿದ್ದು ಸಾವನ್ನಪ್ಪಿರುವುದಾಗಿ ಹೇಳಲಾಗಿದೆ. ಬಾಲಕಿ ಹಾನಗಲ್ ತಾಲೂಕಿನ ವಾಸನ ಗ್ರಾಮದಿಂದ ಕುಸನೂರು ಗ್ರಾಮದ ಪ್ರೌಢಶಾಲೆಗೆ ಬರುತ್ತಿದ್ದಳು.

# ಸರ್ಕಾರಿ ಫುಲ್, ಖಾಸಗಿ ಡಲ್

**(1ನೇ ಪುಟದಿಂದ)** ಕಷ್ಟವಾಗಿದೆ. ಈಗ ಶೇ.20-25ರಷ್ಟು ಜನರು ಖಾಸಗಿ ಬಸ್ ಬಿಟ್ಟು ಹೋದರೂ ನಿರ್ವಹಣೆ ಕಷ್ಟ ಎಂದವರು ಹೇಳಿದರು.

ಮೊದಲೆಲ್ಲ ಖಾನಾಹೊಸಳ್ಳಿಗೆ ತೆರಳುವ ಬಸ್‌ನಲ್ಲಿ ಜನ ನಿಂತುಕೊಂಡು ಹೋಗುತ್ತಿದ್ದರು. ಈಗ ಜಗಳೂರಿನವರೆಗೆ ಸರ್ಕಾರಿ ಬಸ್‌ನಲ್ಲಿ ತೆರಳಿ, ನಂತರ ಖಾಸಗಿ ಬಸ್‌ಗೆ ಬರುತ್ತಿದ್ದಾರೆ. ಹೀಗಾಗಿ ಸೀಟ್‌ಗಳೆಲ್ಲಾ ಖಾಲಿ ಇವೆ ಎಂದು ಬಸ್ ಚಾಲಕ ಸುರೇಶ್ ತಿಳಿಸಿದರು.



ಚನ್ನಗಿರಿ, ಬಾಡ ಹಾಗೂ ಸಂತೇಬೆನ್ನೂರು ಮಾರ್ಗಗಳಲ್ಲಿ ಖಾಸಗಿ ಬಸ್‌ಗಳಿಗೆ ಬರುವವರ ಸಂಖ್ಯೆ ಶೇ.75 ರಷ್ಟು ಕಡಿಮೆಯಾಗಿದೆ. 8-10 ಜನ ಬಂದರೂ ಸಾಕು ಎಂದು ಬಸ್ ಓಡಿಸುವಂತಾಗಿದೆ ಎಂದು ಖಾಸಗಿ ಬಸ್ ನಿರ್ವಾಹಕ ನಿಂಗರಾಜ್ ತಿಳಿಸಿದ್ದಾರೆ.

ಮೊದಲು ಖಾಸಗಿ ಬಸ್‌ಗಳಿಗೆ ದಿನಕ್ಕೆ 8-9 ಸಾವಿರ ಜನ ಬರುತ್ತಿದ್ದರು. ಈಗ ಅವರ ಸಂಖ್ಯೆ 3-4 ಸಾವಿರಕ್ಕೆ ಇಳಿದಿದೆ. ಬರುವ ಆದಾಯ ಡೀಸೆಲ್‌ಗೆ ಹೊಂದಿಸಿದರೆ ಸಾಕು ಎನ್ನುವಂತಾಗಿದೆ ಎಂದು ಖಾಸಗಿ ಬಸ್ ಏಜೆಂಟರು ಹೇಳುತ್ತಿದ್ದಾರೆ.

ಮತ್ತೊಂದೆಡೆ ಸರ್ಕಾರಿ ಬಸ್‌ಗಳಲ್ಲಿ ಜನರು ತುಂಬಿ ತುಳುಕುತ್ತಿದ್ದರು. ಸಂಜೆ ವೇಳೆಯಲ್ಲಿ ಚನ್ನಗಿರಿ ಮಾರ್ಗಕ್ಕೆ ತೆರಳುವ ಬಸ್‌ಗಳು ಕಾಲಿಡಲೂ ಜಾಗವಿಲ್ಲದಷ್ಟು ಭರ್ತಿಯಾಗಿದ್ದವು. ಕೆಲವರು ಫುಟ್‌ಬೋರ್ಡ್ ಮೇಲೆ ನೇತಾಡುತ್ತಿದ್ದರು.

ಹಿಂದಿನ ದಿನಗಳಿಗೆ ಹೋಲಿಸಿದರೆ ಸರ್ಕಾರಿ ಬಸ್‌ಗಳಿಗೆ ಬರುವವರ ಸಂಖ್ಯೆ ಶೇ.50ರಷ್ಟು ಹೆಚ್ಚಾಗಿದೆ. ಬಹುತೇಕ ಎಲ್ಲ ಮಾರ್ಗಗಳಲ್ಲಿ ಇದೇ ಪರಿಸ್ಥಿತಿ ಇದೆ ಎಂದು ಸರ್ಕಾರಿ ಬಸ್‌ಗಳ ಡ್ರೈವರ್ ಹಾಗೂ ಕಂಡಕ್ಟರ್‌ಗಳು ತಿಳಿಸಿದ್ದಾರೆ.

ಸರ್ಕಾರದ ಉಚಿತ ಪ್ರಯಾಣ ಗ್ಯಾರಂಟಿಯು ಮಹಿಳೆಯರ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಆದರೆ, ಖಾಸಗಿ ಬಸ್‌ಗಳ ವಲಯದ ಭವಿಷ್ಯ ಈಗ ಅತಂತ್ರವಾಗಿದೆ. ಮುಂಬರುವ ದಿನಗಳಲ್ಲಿ ಸರ್ಕಾರ ಖಾಸಗಿ ವಲಯಕ್ಕೆ ನೆರವಾಗದೇ ಇದ್ದರೆ, ಕೇವಲ ಸರ್ಕಾರಿ ಬಸ್‌ಗಳಷ್ಟೇ ಉಳಿಯುವ ಪರಿಸ್ಥಿತಿ ಬರಬಹುದು.

### ಪಾಲನೆಯಾಗದ 50% ಮೀಸಲಾತಿ

ದಾವಣಗೆರೆ, ಜೂ. 12 – ರಾಜ್ಯ ಸರ್ಕಾರ ಹೆಣ್ಣು ಮಕ್ಕಳು ಹಾಗೂ ತೃತೀಯ ಲಿಂಗಿಗಳಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಿತ್ತು. ಪುರುಷರಿಗೆ ಸಮಾಧಾನಕರವಾಗಿ ಶೇ.50ರಷ್ಟು ಪಾವತಿ ಸೀಟುಗಳನ್ನು ಕಾಯ್ದಿರಿಸುವುದಾಗಿ ಹೇಳಿತ್ತು.

ಆದರೆ, ಉಚಿತ ಪ್ರಯಾಣದ ಎರಡನೇ ದಿನದಂದು ಈ ಮೀಸಲಾತಿ ಜಾರಿಗೆ ಬಂದಿರುವ ಬಗ್ಗೆ ಅನುಮಾನಗಳು ವ್ಯಕ್ತವಾದವು. ಈ ಬಗ್ಗೆ ಕಂಡಕ್ಟರ್‌ಗಳ ಬಳಿ ವಿಚಾರಿಸಿದಾಗ, ಯಾವ ರೀತಿ ಸೀಟು ಕಾಯ್ದಿರಿಸಬೇಕು ಹೇಳಿ? ಈಗಾಗಲೇ ಹತ್ತಿರುವ ಹಾಗೂ ಸೀಟುಗಳ ಮೇಲೆ ಕುಳಿತಿರುವ ಮಹಿಳೆಯರನ್ನು ಇಳಿಸಬೇಕಾ? ಆ ರೀತಿ ಮಾಡಲು ಸಾಧ್ಯವಾಗುತ್ತದೆಯೇ? ಎಂದು ಮರು ಪ್ರಶ್ನಿಸಿದರು.

### ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮ

ಈಗ ಕೆಲ ಮಾರ್ಗಗಳಲ್ಲಿ ಖಾಸಗಿ ಬಸ್‌ಗಳಷ್ಟೇ ಸಂಚರಿಸುತ್ತಿವೆ. ಮುಂದಿನ ದಿನಗಳಲ್ಲಿ ಇಲ್ಲಿಯ ಜನರೂ ನಮಗೆ ಸರ್ಕಾರಿ ಬಸ್ ಬೇಕು ಎಂಬ ಪಟ್ಟು ಹಿಡಿಯಬಹುದು. ಆಗ ಖಾಸಗಿ ಬಸ್‌ಗಳು ಇನ್ನಷ್ಟು ಸಮಸ್ಯೆಗೆ ಸಿಲುಕಲಿವೆ ಎಂದು ಖಾಸಗಿ ಬಸ್‌ಗಳ ಏಜೆಂಟರು ಕಳವಳ ವ್ಯಕ್ತಪಡಿಸಿದ್ದಾರೆ.

ಒಂದು ಖಾಸಗಿ ಬಸ್ ಮಾಲೀಕರಿಗಷ್ಟೇ ಅಲ್ಲದೇ, ಕನಿಷ್ಠ 20-25 ಜನರಿಗೆ ಕೆಲಸ ಕೊಡುತ್ತಿದೆ. ಚಾಲಕರು, ನಿರ್ವಾಹಕರು, ಏಜೆಂಟರಿಂದ ಹಿಡಿದು ಗ್ಯಾರೇಜ್‌ಗಳವರೆಗೆ ಹಲವರು ಈ ವಲಯದಲ್ಲಿದ್ದಾರೆ. ಅವರ ಭವಿಷ್ಯದ ಬಗ್ಗೆ ಸರ್ಕಾರ ಯೋಚಿಸಬೇಕು ಎಂದವರು ಹೇಳಿದ್ದಾರೆ.

### ರಾಜ್ಯದಲ್ಲಿ ಮೊದಲ ದಿನ 5.71 ಲಕ್ಷ ಮಹಿಳೆಯರಿಂದ ಉಚಿತ ಪ್ರಯಾಣ

ಬೆಂಗಳೂರು, ಜೂ. 12 - ಸರ್ಕಾರಿ ಸ್ವಾಮ್ಯದ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ಶಕ್ತಿ ಯೋಜನೆ ಜಾರಿಯಾದ ಮೊದಲ ದಿನದಂದು 5.71 ಲಕ್ಷ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ.

ಭಾನುವಾರ ಮಧ್ಯಾಹ್ನ 1 ಗಂಟೆಯಿಂದ ಉಚಿತ ಪ್ರಯಾಣ ಸೌಲಭ್ಯ ಆರಂಭಿಸಲಾಗಿತ್ತು. ಮೊದಲ ದಿನದಂದು 5.71 ಲಕ್ಷ ಮಹಿಳೆಯರು ಪ್ರಯಾಣಿಸಿದ್ದಾರೆ. ಈ ಪೈಕಿ ಬಿಎಂಟಿಸಿ ಬಸ್‌ನಲ್ಲಿ 2,01,215, ವಾಯವ್ಯ ಸಾರಿಗೆ ಬಸ್‌ನಲ್ಲಿ 1,22,354, ಕಲ್ಯಾಣ ಕರ್ನಾಟಕ ಸಾರಿಗೆಯಲ್ಲಿ 53,623, ಮಹಿಳೆಯರು ಪ್ರಯಾಣಿಸಿದ್ದಾರೆ. ಇವರ ಪ್ರಯಾಣದ ಟಿಕೆಟ್ ವೆಚ್ಚ 1.40 ಕೋ ರೂ. ಆಗಿದೆ.

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ
Numero Astrologer & Palmistry

ವಂಶಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 5 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ
ವಿಳಾಸ: ಪಂ. ಜಿ.ವಿ. ಭಟ್ಟರ್
ಆಹಾರ್ ಹೋಟೆಲ್, ಗಾಂಧಿ ಸರ್ಕಲ್, ದಾವಣಗೆರೆ.
ಮೊಬೈಲ್ : 94481 78626, 89716 99826

ಆತ್ಮೀಯ ಗೆಳೆಯರಿಗೆ ಹುಟ್ಟುಹಬ್ಬದ ಶುಭಾಶಯಗಳು


ಶ್ರೀ ಎ.ಆರ್. ನಾಗರಾಜ್ ಗೌಡಗೊಂಡನಹಳ್ಳಿ
ಶ್ರೀನಿವಾಸ್ ಶ್ರೀ ರಾಮ್ ಅಸೋಸಿಯೇಟ್ಸ್
ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಆತ್ಮೀಯ ಗೆಳೆಯರಾದ
ಜಗಳೂರು ಪ್ರಥಮ ದರ್ಜೆ ಗುತ್ತಿಗೆದಾರರಾದ
ಶ್ರೀ ಎ.ಆರ್. ನಾಗರಾಜ್ ಗೌಡಗೊಂಡನಹಳ್ಳಿ
ಶ್ರೀ ರಾಮ್ ಅಸೋಸಿಯೇಟ್ಸ್ ಮಾಲೀಕರಾದ
ಶ್ರೀನಿವಾಸ್
ಅವರುಗಳಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.
✦ ಶ್ರೀನಿವಾಸ ದಾಸಕರಿಯಪ್ಪ ಗೆಳೆಯರ ಬಳಗ
✦ ಹ್ಯಾಪಿ ಫ್ರೆಂಡ್ಸ್ ಗ್ರೂಪ್, ವಿನೋಬನಗರ
✦ ಇಂಡಿಯನ್ ಕಾಫಿ ಬಾರ್ ಗೆಳೆಯರ ಬಳಗ, ಹಳೇ ಬಸ್ ನಿಲ್ದಾಣ
✦ ಟೀ ಲಾಂಚ್ ಗೆಳೆಯರ ಬಳಗ, ದಾವಣಗೆರೆ
Be safe stay home.

## ಬಾಪೂಜಿ ಪ್ರಾಥಮಿಕ ಶಾಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ವಿಶ್ವ ಪರಿಸರ ದಿನಾಚರಣೆ




ದಾವಣಗೆರೆ ಜೂ.12- ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಬಾಪೂಜಿ ತಾಂತ್ರಿಕ ಮಹಾ ವಿದ್ಯಾಲಯದ ಸಿವಿಲ್ ವಿಭಾಗದ ಸಹ ಪ್ರಾಧ್ಯಾಪಕ ಡಾ. ಸುರೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿ, ನಮ್ಮ ಸುತ್ತಮುತ್ತಲಿನ ಪರಿಸರವು ಪ್ರತಿದಿನವೂ ನಮ್ಮೆಲ್ಲರಿಗೂ ತುಂಬಾ ಅವಶ್ಯಕವಾಗಿದ್ದು, ವಿದ್ಯಾವಂತರಾದ ನಾವು ಪ್ಲಾಸ್ಟಿಕ್ ವಸ್ತುಗಳನ್ನು ಬಳಸದೇ ಬಟ್ಟೆಯಿಂದ ತಯಾರಾಗುವ ವಸ್ತುಗಳನ್ನು ಬಳಕೆ ಮಾಡಿ ಪರಿಸರವನ್ನು ಕಾಪಾಡಬೇಕೆಂದು ತಿಳಿಸಿದರು.

ಪ್ರಾಂಶುಪಾಲರಾದ ಶ್ರೀಮತಿ ಜೆ.ಎಸ್. ವನಿತಾ ಮಾತನಾಡಿ, ನಾವು ಜೀವಿಸಲು ಗಾಳಿಯು ಅತ್ಯಂತ ಶ್ರೇಷ್ಠವಾಗಿದ್ದು, ಈ ಪರಿಸರದಲ್ಲಿ ಸಿಗುವಂತಹ ಗಾಳಿಯು ನಮ್ಮೆಲ್ಲರಿಗೂ ಅತಿ ಅವಶ್ಯಕವಾಗಿದ್ದು, ಸಾಕಷ್ಟು ಗಿಡಮರಗಳನ್ನು ಬೆಳೆಸಿ ಜಾಗತಿಕ ತಾಪಮಾನವನ್ನು ಕಡಿಮೆ ಮಾಡುವಲ್ಲಿ ನಾವೆಲ್ಲರೂ ಕೈಜೋಡಿಸೋಣವೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶಾಲೆಯ ಶೈಕ್ಷಣಿಕ ಸಲಹೆಗಾರ ಮಂಜಪ್ಪ, ಪ್ರಾಥಮಿಕ ವಿಭಾಗದ ಮುಖ್ಯಸ್ಥರಾದ ಶೀಬಾರಾಣಿ, ಪ್ರಭು ಪಿ.ವಿ., ಸವಿತಾ ಆರ್., ಶಾಲೆಯ ಶಿಕ್ಷಕ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ವಾರದೊಳಗಾಗಿ 800 ರೈತರಿಗೆ ಓಟಿಎಸ್ ಜಾರಿ: ಆತಂಕ ಬೇಡ

ರಾಣೇಬೆನ್ನೂರು, ಜೂ. 12- ಒಂದು ವಾರದೊಳಗಾಗಿ ಸುಮಾರು 800 ರೈತರಿಗೆ 2 ನೇ ಹಂತದ ಓಟಿಎಸ್ ಜಾರಿ ಮಾಡುತ್ತೇವೆ. ಯಾವುದೇ ಆತಂಕ ಬೇಡ. ನಿಮ್ಮ ಜೊತೆ ನಾವಿದ್ದೇವೆ. ಹೋರಾಟ ನಿಲ್ಲಿಸಿ ಮಾತುಕತೆಗೆ ಬನ್ನಿ ಎಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಹುಬ್ಬಳ್ಳಿ ವಲಯದ ಡಿ.ಜಿ.ಎಂ. ರಮಾನಂದ ಹೇಳಿದರು.



ಅವರು ಇಂದು ಬೆಳಗ್ಗೆ 11 ಘಂಟೆಗೆ ರಾಣೇಬೆನ್ನೂರು ತಹಶೀಲ್ದಾರರ ಕಛೇರಿಯಲ್ಲಿ ಓಟಿಎಸ್ ಯೋಜನೆಯ ಸಂಬಂಧ ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಅಣ್ಣಯ್ಯ ಅಧ್ಯಕ್ಷತೆಯಲ್ಲಿ ನಡೆದ ರೈತ ಮುಖಂಡರ, ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು.

ಈ ಹಿಂದೆ ಮಾಕನೂರು ಬ್ರಾಂಚ್ ಶಿವಮೊಗ್ಗ ವಲಯಕ್ಕೆ ಬರುತ್ತಿತ್ತು. ಈಗ ಹುಬ್ಬಳ್ಳಿಯ ವಲಯಕ್ಕೆ ಬರುತ್ತಿದೆ. ನ್ಯಾಯಯುತವಾಗಿ ಕೇಳುತ್ತಿರುವ ನಿಮ್ಮ ಬೇಡಿಕೆ ಈಡೇರಿಸಲು ನಾನೀಗ ಸನ್ನದ್ಧರಾಗಿದ್ದೇವೆ. ಯಾವುದೇ ಆತಂಕ ಬೇಡ. ವಾರದೊಳಗಾಗಿ 2 ನೇ ಹಂತದಲ್ಲಿ 800 ರೈತರಿಗೆ ಓಟಿಎಸ್ ಯೋಜನೆ ಜಾರಿ ಮಾಡುತ್ತೇವೆಂದು ತಾಲೂಕಾ ದಂಡಾಧಿಕಾರಿಗಳ, ಜಿಲ್ಲ ಲೀಡ್ ಬ್ಯಾಂಕ್ ವ್ಯವಸ್ಥಾಪಕರ ಸಮ್ಮುಖದಲ್ಲಿಯೇ ಘೋಷಿಸಿದರು.

'ಮಾಡು ಇಲ್ಲವೇ ಮಡಿ' ಎಂಬ ಘೋಷ ವ್ಯಾಖ್ಯದೊಂದಿಗೆ ಓಟಿಎಸ್ ಜಾರಿ ಕುರಿತು ಇಂದು ಮಾಕನೂರು ಕ್ರಾಸ್ ಬಳಿ ರೈತ ಮುಖಂಡರಾದ ರವೀಂದ್ರಗೌಡ ಎಫ್. ಪಾಟೀಲ, ಈರಣ್ಣ ಹಲಗೇರಿ ನೇತೃತ್ವದಲ್ಲಿ ಬೃಹತ್ ಪ್ರಮಾಣ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ವಿಷಯದ ಗಂಭೀರತೆ ಅರಿತ ಜಿಲ್ಲಾಡಳಿತ, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಅಣ್ಣಯ್ಯ ಇವರ ಅಧ್ಯಕ್ಷತೆಯಲ್ಲಿ ಪ್ರತಿಭಟನೆಗೂ ಮೊದಲೇ ರೈತ ಮುಖಂಡರ ಜೊತೆ ಬ್ಯಾಂಕ್ ಅಧಿಕಾರಿಗಳ ಸಭೆ ಕರೆದು ಓಟಿಎಸ್ ಯೋಜನೆ ಜಾರಿಗೊಳಿಸಿ ಇಂದು ನಡೆಯಬಹುದಾಗಿದ್ದ ಬೃಹತ್ ಪ್ರತಿಭಟನೆಯನ್ನು ವಾಪಸ್ ಪಡೆಯುವಂತೆ ಮಾಡಲು ಯಶಸ್ವಿಯಾದರು.

ನೇತೃತ್ವ ವಹಿಸಿದ್ದ ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಮಾತನಾಡಿ, 2 ನೇ ಹಂತದ ಓಟಿಎಸ್ ಜಾರಿ ನಮ್ಮೆಲ್ಲರ ನಿರಂತರ ಹೋರಾಟಕ್ಕೆ ಸಂದ ಜಯವಾಗಿದೆ ಎಂದರು.

**ರಾಣೇಬೆನ್ನೂರು**

ಈರಣ್ಣ ಹಲಗೇರಿ ಮಾತನಾಡಿ ನಮ್ಮ ಹೋರಾಟಕ್ಕೆ ಮನ್ನಣೆ ನೀಡಿ ಓಟಿಎಸ್ ಜಾರಿಗೊಳಿಸಿದ ಡಿ.ಜಿ.ಎಂ. ರಮಾನಂದರವರಿಗೂ ಮತ್ತು ಸಹಕಾರ ನೀಡಿದ ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಗೆ ಧನ್ಯವಾದ ತಿಳಿಸಿದರು.

ನ್ಯಾಯವಾದಿ ಮತ್ತು ಹೋರಾಟ ಸಮಿತಿಯ ಕಾನೂನು ಸಲಹೆಗಾರರಾದ ಎಸ್.ಡಿ. ಹಿರೇಮಠ ಮಾತನಾಡಿ, ಬ್ಯಾಂಕಿನವರು ಕಾಲಕಾಲಕ್ಕೆ ಗ್ರಾಹಕರ ಸಭೆ ಕರೆದರೆ ಮಾಕನೂರು ಬ್ಯಾಂಕಿನಲ್ಲಿ ರೈತರ ಗಮನಕ್ಕೆ ಬಾರದೆ ಆಗಿರುವ ರಿಸ್ಟ್ರಕ್ಚರ್ (ಮರುಪಾವತಿ) ನಿಂದಾದ ಅನಾಹುತಗಳನ್ನು, ಅವಾಂತರಗಳನ್ನು ರೈತರ ಶೋಷಣೆಯನ್ನು ತಪ್ಪಿಸಬಹುದೆಂದರು.

ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಅಣ್ಣಯ್ಯ ಇವರು ಮಾತನಾಡಿ ರೈತರಿಗೆ ಯಾವುದೇ ರೀತಿ ತೊಂದರೆಯಾಗದಂತೆ ಇತರೆ ಬ್ಯಾಂಕಿನಲ್ಲಿ ಆಗಿರುವ ಓಟಿಎಸ್ ಪದ್ಧತಿಯಂತೆ ಇಲ್ಲಿ ಕೂಡ ಜವಾಬ್ದಾರಿ ವಹಿಸುತ್ತೇನೆಂದರು.

ತಹಶೀಲ್ದಾರ್ ಎ ಗುರುಬಸವ ರಾಜಪ್ಪ, ಶಿರಸ್ತೆದಾರ ದೊಡಮನಿ, ಗ್ರೇಡ್ 2 ತಹಶೀಲ್ದಾರ್ ಎಸ್.ಆರ್. ಸಿದ್ದನಗೌಡರ, ಬ್ಯಾಂಕ್ ವ್ಯವಸ್ಥಾಪಕರಾದ ಅತುಲ್ ಕುಮಾರ ಸಿಂಗ್ ಮತ್ತು ಸಂಜೀವ ರಡ್ಡಿ ಉಪಸ್ಥಿತರಿದ್ದರು.

ರೈತ ಸಂಘದ ಅಧ್ಯಕ್ಷರಾದ ಸುರೇಶಪ್ಪ ಗರಡಿಮನಿ, ಹರಿಹರಗೌಡ ಪಾಟೀಲ, ದಿನಗೂಲಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಕೊಂಗಿಯವರ, ಚಂದ್ರಪ್ಪ ಬಿಸ್ನಳ್ಳಿ, ದಿಳ್ಳೆಪ್ಪ ಗಂದಣ್ಣನವರ, ಸುರೇಶಪ್ಪ ಮಲ್ಲಾಪುರ, ಗಂಗಮ್ಮ ಜಾನಕ್ಕನವರ ಮುಂತಾದವರಿದ್ದು. ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಒದಗಿಸಿತ್ತು.

# ಪ್ರತಿಶಾಲೆಯಲ್ಲೂ ಪರಿಸರದ ಬಗ್ಗೆ ಅರಿವು ಮೂಡಿಸಬೇಕು



**ಭಾನುವಳ್ಳಿ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್**

ಮಲೇಬೆನ್ನೂರು, ಜೂ.12- ಭಾನುವಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ಪರಿಸರ ದಿನಾಚರಣೆ ಅಂಗವಾಗಿ ಪರಿಸರದ ಅರಿವು ಹಾಗೂ ಗಿಡನಾಟಿ ಕಾರ್ಯಕ್ರಮವನ್ನು ಶಾಸಕ ಬಿ.ಪಿ.ಹರೀಶ್ ಅವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಹರೀಶ್ ಅವರು, ಪ್ರತಿ ಶಾಲೆಗಳಲ್ಲಿ ಪರಿಸರದ ಬಗ್ಗೆ ಅರಿವು ಮೂಡಿಸುವ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸಿ, ಮಕ್ಕಳಿಗೆ ಪರಿಸರದ ಮಹತ್ವ ತಿಳಿಸುವ ಕೆಲಸ ಮಾಡಬೇಕೆಂದು ಧರ್ಮಸ್ಥಳ ಯೋಜನೆಯವರಿಗೆ ತಿಳಿಸಿ, ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಶಾಲಾ ವಿದ್ಯಾರ್ಥಿಗಳಿಗೆ ಗಿಡಗಳನ್ನು ವಿತರಿಸಲಾಯಿತು. ಅಲ್ಲದೇ, ಶಾಲೆಯ ಆವರಣದಲ್ಲಿ ಗಿಡ ನಾಟಿ ಮಾಡಲಾಯಿತು.

ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಕುಮಾರ್ ನಾಗನಾಳ್, ಹರಿಹರ ಯೋಜನಾಧಿಕಾರಿ ಗಣಪತಿ ಮಾಳಂಜಿ ಮಾತನಾಡಿ, ಮಕ್ಕಳು ಪರಿಸರ ಸಂರಕ್ಷಣೆಗೆ ಗಮನ ಹರಿಸಬೇಕೆಂದರು

ಸಾಹಿತಿ ಯು.ಕೆ.ಅಣ್ಣಪ್ಪ ಮಾತನಾಡಿ, ಪ್ರತಿದಿನವೂ ನಾವು ಪರಿಸರದ ಸಂರಕ್ಷಿಸುವ ಬಗ್ಗೆ ಚಿಂತನೆ ಮಾಡಿ, ಆ ನಿಟ್ಟಿನಲ್ಲಿ ಪರಿಸರ ಬೆಳೆಸುವ ಕೆಲಸ ಮಾಡೋಣ ಎಂದರು.

ಭಾನುವಳ್ಳಿ ಗ್ರಾ.ಪಂ. ಅಧ್ಯಕ್ಷೆ ಮಂಜುಳಾ ವೀರೇಶ್, ತಾ.ಪಂ. ಮಾಜಿ ಅಧ್ಯಕ್ಷ ಹೆಚ್.ಕೆ. ಕನ್ನಪ್ಪ, ಶಾಲಾ ಮುಖ್ಯ ಶಿಕ್ಷಕ ಹನುಮಂತಪ್ಪ ಮಾತನಾಡಿದರು.

ಗ್ರಾ.ಪಂ. ಮಾಜಿ ಸದಸ್ಯ ಹೆಚ್.ಎಸ್. ಕರಿಯಪ್ಪ, ರೈತ ಸಂಘದ ಅಧ್ಯಕ್ಷ ಕೊಟ್ರೇಶಪ್ಪ, ನಿವೃತ್ತ ಶಿಕ್ಷಕ ಸಿದ್ದಪ್ಪ, ಒಕ್ಕೂಟದ ಅಧ್ಯಕ್ಷರಾದ ಮಲ್ಲಿಕಾರ್ಜುನಪ್ಪ, ದಾಕ್ಷಾಯಣಮ್ಮ, ಅನಿತಾ ಹಾಗೂ ಪದಾಧಿಕಾರಿಗಳು ಮತ್ತು ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಶಾಲಾ ಶಿಕ್ಷಕರು, ವಲಯ ಮೇಲ್ವಿಚಾರಕಿ ಶ್ರೀಮತಿ ಗಂಗಮ್ಮ ಮತ್ತು ಸೇವಾ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಮಸ್ಯೆಯಾದರೆ ಸಿಇಒಗಳೇ ಹೊಣೆ

**(1ನೇ ಪುಟದಿಂದ)** ಸಂಪರ್ಕದಲ್ಲಿದ್ದು, ನೀರಿನ ಸಮಸ್ಯೆ ಕುರಿತು ಸರಿಯಾದ ಮಾಹಿತಿ ಒದಗಿಸಬೇಕು. ಜಾನುವಾರುಗಳಿಗೂ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರ ವಹಿಸಬೇಕು. ಮುನ್ನೆಚ್ಚರಿಕಾ ಕ್ರಮಗಳಿಗೆ ಆದ್ಯತೆ ನೀಡಿ, ಸಮಸ್ಯೆ ಬಗೆಹರಿಸಲು ಸರ್ಕಾರ ನಿಮಗೆ ಎಲ್ಲಾ ಬೆಂಬಲ ನೀಡಲಿದೆ ಎಂದರು.

ಕುಡಿಯುವ ನೀರು ಒದಗಿಸುವ ಸಂದರ್ಭದಲ್ಲಿ ಆಡಳಿತಾತ್ಮಕ ಸಮಸ್ಯೆ ಮುಂದಿಟ್ಟುಕೊಳ್ಳಿ. ಮೊದಲು ಜನರ ಅಗತ್ಯ ಪೂರೈಸಿ. ನಂತರ ಉಳಿದ ವಿಚಾರ. ನೀರು ಪೂರೈಕೆ ಸಂದರ್ಭದಲ್ಲಿ ಕಲುಷಿತ ನೀರು ಸರಬರಾಜು ಆಗದಂತೆ ಎಚ್ಚರಿಕೆ ವಹಿಸಿ. ಯಾವುದೇ ಭಾಗದಿಂದ ಸಮಸ್ಯೆ ಇದೆ ಎಂದು ನನ್ನ ಕಿವಿಗೆ ಬಿದ್ದರೆ, ನಿಮ್ಮನ್ನು ಹೊಣೆ ಮಾಡಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಮಸ್ಯೆ ಎದುರಾದ ಕೂಡಲೇ 24 ಗಂಟೆಯೊಳಗೆ ನೀರು ಸರಬರಾಜಿಗೆ ಕ್ರಮಕೈಗೊಳ್ಳಿ. ಸಿಇಒಗಳು ಪ್ರತಿ ತಾಲ್ಲೂಕಿಗೆ ಭೇಟಿ ಕೊಟ್ಟು, ಪಿಡಿಓಗಳ ಕಾರ್ಯನಿರ್ವಹಣೆ ಬಗ್ಗೆ ನಿಗಾವಹಿಸಿ. ಜೊತೆಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ, ನೀರಿನ ಪೈಪ್‌ಲೈನ್ ಅಳವಡಿಸುವುದರ ಗುಣಮಟ್ಟ ಪರಿಶೀಲಿಸಿ ಎಂದು ಹೇಳಿದರು.

ಕಳೆದ ಕೆಲವು ದಿನಗಳಲ್ಲಿ ಮಳೆಯ ಕೊರತೆಯಿಂದಾಗಿ ಕೆಲವೆಡೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಇದಕ್ಕೆ ಮುಂಗಾರು ಪೂರ್ವ ಮಳೆ ಕೊರತೆ ಕಾರಣ.

ಹವಾಮಾನ ಇಲಾಖೆಯ ಪ್ರಕಾರ ರಾಜ್ಯದಲ್ಲಿ ಮುಂಗಾರು ಜೂ.10ರಂದು ಪ್ರಾರಂಭವಾಗಿದೆ. ಆದರೆ, ಇಲ್ಲಿಯವರೆಗೂ ನಮಗೆ ಶೇ.67 ರಷ್ಟು ಕೊರತೆ ಕಂಡು ಬಂದಿದೆ. ಮುಂದೆ ಸಮಸ್ಯೆ ಬಗೆಹರಿಯಲಿದೆ ಎಂಬ ವಿಶ್ವಾಸವಿದೆ. ಯಾವುದಕ್ಕೂ ನೀವು ಜಾಗೃತರಾಗಿ ಕೆಲಸ ಮಾಡಿ. ಕೊಪ್ಪಳ ಜಿಲ್ಲೆಯಲ್ಲಿ ಕಲುಷಿತ ನೀರಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆಗೆ ಆದೇಶ ಮಾಡಿದ್ದೇನೆ ಎಂದರು.

ಜಲಜೀವನ್ ಮಿಷನ್ ಯೀಜನೆಯಡಿ ಸುಸ್ಥಿರ ನೀರಿನ ಮೂಲ ಇರುವ ಯೋಜನೆಗಳನ್ನು ಗುರುತಿಸಿ ಅವುಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಅವರು ಇದೇ ಸಂದರ್ಭದಲ್ಲಿ ಸೂಚಿಸಿದರು.

ಈ ಯೋಜನೆಯ ಕಾಮಗಾರಿ ಹಾಗೂ ರಾಜ್ಯದಲ್ಲಿ ಅಳವಡಿಸಿರುವ ಆರ್. ಓ. ಪ್ಲಾಂಟ್‌ಗಳ ಕುರಿತು ಮೂರನೇ ವ್ಯಕ್ತಿಯಿಂದ ಆಡಿಟ್ ಮಾಡಿಸಲು ಸಂಬಂಧಪಟ್ಟ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಆದೇಶ ಮಾಡಿದರು.

## ಬಿಸಿಯೂಟ ತಯಾರಕರ ವೇತನ ಹೆಚ್ಚಿಸಲು ಇಂದು ಜಿಲ್ಲಾಧಿಕಾರಿ ಕಚೇರಿ ಬಳಿ ಹೋರಾಟ

ಶಾಲೆಗಳಲ್ಲಿ ಅಡುಗೆ ಕೆಲಸ ಮಾಡುತ್ತಿರುವ ಬಿಸಿಯೂಟ ತಯಾರಕರ ವೇತನವನ್ನು ಆರು ಸಾವಿರ ರೂಪಾಯಿಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ, ರಾಜ್ಯಾದ್ಯಂತ ಇಂದು ಹೋರಾಟ ಮಾಡಲು ರಾಜ್ಯ ಸಮಿತಿ ಕರೆ ನೀಡಿದೆ ಎಂದು ಬಿಸಿಯೂಟ ತಯಾರಕರ ಫೆಡರೇಷನ್ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸೇರಿ ದಾವಣಗೆರೆ ಜಿಲ್ಲೆಯ ಬಿಸಿಯೂಟ ತಯಾರಕರು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮತ್ತು ಶಿಕ್ಷಣ ಮಂತ್ರಿಗಳಿಗೆ ಮನವಿ ಸಲ್ಲಿಸಲಿದ್ದಾರೆ.

ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳ ಬಿಸಿಯೂಟ ತಯಾರಕರು ಅಂದು ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಆಗಮಿಸಬೇಕೆಂದು ಸಂಘಟನೆ ಕರೆ ನೀಡಿದೆ.

## ಮಾಗನೂರು ಬಸಪ್ಪ ಕಾಲೇಜಿನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 12- ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ಇಕೋ ಕ್ಲಬ್ ವತಿಯಿಂದ ಮಾಗನೂರು ಬಸಪ್ಪ ಪಿ ಯು ಕಾಲೇಜಿನ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಇಡೀ ವಿಶ್ವವನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು 'ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟಿ' ಎಂಬ ಧ್ಯೇಯ ವಾಕ್ಯದ ಹಿನ್ನೆಲೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಸಸಿಗಳಿಗೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಉದ್ಘಾಟಿಸಿದರು.

ದ್ವಿತೀಯ ಪಿಯುಸಿ ವಿದ್ಯಾರ್ಥಿ ಹೆಚ್.ಆರ್. ಭರತ್, ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಕಾಲೇಜಿನ ಇಕೋ ಕ್ಲಬ್‌ನ ಮುಖ್ಯಸ್ಥ ಎಸ್.ಆರ್. ಸಿದ್ದೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಪ್ರಸಾದ್ ಎಸ್. ಬಂಗೇರ ಉಪಸ್ಥಿತರಿದ್ದರು. ಕಾಲೇಜಿನ ಇಕೋ ಕ್ಲಬ್‌ನ ಸದಸ್ಯರುಗಳಾದ ಶ್ರೀಮತಿ ಆರ್. ಮಮತ ನಿರೂಪಿಸಿದರು. ಡಾ. ಬಿ.ವಿ. ರವಿಶಂಕರ್ ವಂದಿಸಿದರು.

## ಧರ್ಮಸ್ಥಳ ಸಂಸ್ಥೆಯಿಂದ ಶಾಸಕ ಬಿ.ಪಿ.ಹರೀಶ್‌ಗೆ ಸನ್ಮಾನ



ಹರಿಹರ, ಜೂ. 12 - ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ಶಾಸಕ ಬಿ.ಪಿ. ಹರೀಶ್ ಅವರನ್ನು ಸನ್ಮಾನಿ ಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಚಿತ್ರದುರ್ಗ ಜಿಲ್ಲಾ ಪ್ರಾದೇಶಿಕ ನಿರ್ದೇಶಕಿ ಗೀತಾ ಬಿ, ಯೋಜನಾಧಿಕಾರಿ ಗಣಪತಿ ಮಾಳಂಜಿ, ಹೆಚ್.ಪಿ. ಬಾಬಣ್ಣ, ಕೊಂಡಜ್ಜಿ ರಾಜಶೇಖರ್ ಇದ್ದರು.

## ಕನಕ ಗುರುಪೀಠದ ಶಾಖಾ ಮಠ : ಸ್ಥಳ ಪರಿಶೀಲನೆ



ಮಲೇಬೆನ್ನೂರು, ಜೂ.12- ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಶಾಖಾಮಠವನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡುವ ಕುರಿತು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಅವರು ಶನಿವಾರ ಜಿಲ್ಲಾಧಿಕಾರಿ ದಯಾನಂದ್ ಮತ್ತು ಶ್ರೀಮಠದ ಭಕ್ತರ ಸಮ್ಮುಖದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.


**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಸೈಟ್ ಬೇಕಾಗಿದೆ**
ಕರ್ನಾಟಕ ಗೃಹ ಮಂಡಳಿಯಲ್ಲಿ
50x80 ಅಥವಾ
40x60 ಉತ್ತರ-ಪೂರ್ವ
94485 35075
ನೇರವಾಗಿ ಮಾಲೀಕರು ಸಂಪರ್ಕಿಸಿ

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರದ ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ. 40x43, East, 80x45 East, 30x50 West, 40x70-40x70 ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
94480 84144

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ ಡಬಲ್ ಬೆಡ್ ರೂಂ ಮನೆಗಳು ಆಫೀಸ್‌ಗೆ ಯೋಗ್ಯವಿರುವ ಮೂರು ಬೆಡ್ ರೂಂ ಮನೆ ಮೊದಲನೇ ಬಸ್ ಸ್ಟ್ಯಾಂಡ್ ಹತ್ತಿರ ಇಂಡಿಪೆಂಡೆಂಟ್ ಹೌಸ್, ವಿದ್ಯಾನಗರ ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ, ವಿನಾಯಕ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**REQUIRED**
Sales Executive for SERVO Lubricants. For Details Please contact :
Servo Stockist
98454 53173

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸರ್ವೀಸ್‌ಗಾಗಿ ಹಾಗೂ ಇತರೆ ಕೆಲಸಕ್ಕಾಗಿ ಬೇಕಾಗಿದ್ದಾರೆ.
70902 69155

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 30x40 West 40 ಅಡಿ ರೋಡ್‌ಗಿದೆ. ಎದುರುಗಡೆ ಪಾರ್ಕ್ ಇದೆ. 20x48 West, 20x30 East, 20x30 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ, ಸಿದ್ದವೀರಪ್ಪ, ಗ್ಲಾಸ್ ಹೌಸ್ ಲೇಔಟ್ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಯಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ:
97315 12365

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ ಯುರೋ ಸ್ಕೂಲ್ ಹತ್ತಿರ 35x60, ಪೂರ್ವ-ಉತ್ತರ ಕಾರ್ನರ್, 30x46 ಪೂರ್ವ, 40x60 ಪಶ್ಚಿಮ, 30x35 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ, 30x50 ಉತ್ತರ, 30x50 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ.
97421 44715

**ಬಾಡಿಗೆಗೆ ಇದೆ**
ಶ್ರೀ ವಿನಯ್ ಎಂಟರ್ ಪ್ರೈಸಸ್‌ರವರ ಮೊದಲನೇಯ 20x100 ಮಹಡಿ (1ನೇ ಫ್ಲೋರ್) ಬಾಡಿಗೆಗೆ ಇದೆ. ವಿಚಾರಿಸಿರಿ. ವಿಳಾಸ : RMC ರೋಡ್, ಬಂಬೂ ಬಜಾರ್, ಹೆಚ್.ಪಿ. ಪೆಟ್ರೋಲ್ ಬಂಕ್ ಪಕ್ಕ, ದಾವಣಗೆರೆ.
94486 67685, 88926 81923

**ಬೇಕಾಗಿದ್ದಾರೆ**
ಮಂಡಿಪೇಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
99162 36521

**EC / ಇಸಿ, E-swathu, Khatha Change Building Licence & Other Property Documents**
96118-66449

**ಬಾಡಿಗೆಗೆ**
ವೆಜ್-ನಾನ್ ವೆಜ್ ಹೋಟೆಲ್ ಖಾಲಿ ಇದೆ. ಬೋರ್‌ವೆಲ್ ನೀರು ಇದೆ. ಕಿಚನ್ ಸಾಮಾನುಗಳು ಇವೆ. ಆಸಕ್ತರು ಸಂಪರ್ಕಿಸಿ.
ಬಾಡಿಗೆ : 15,000 ಸಾವಿರ.
ಅಡ್ವಾನ್ಸ್ : 50,000 ಸಾವಿರ
98446 36351

**Required**
* B.Com., Male Graduates are Required For Canvasing Tata Power Solar systems
* Office boy Required to an Auditor's Office
9900142052

**2 BHK HOUSE FOR RENT/ LEASE**
Near Podar international in J.H. Patel Badavane, Davangere.
95358 41058, 88617 11072

**ತಕ್ಷಣ ಬೇಕಾಗಿದ್ದಾರೆ**
TOYOTA, TVS,
ಬ್ರಿಟಾನಿಯಾ, ಟಾಟಾ ಮೋಟಾರ್ಸ್, ಬಿಗ್‌ಬಜಾರ್ಸ್, ಎಂ.ಎನ್.ಸಿ. ಕಂಪನಿಗಳಿಗೆ, ಆಫೀಸ್‌ಗಳಿಗೆ 7th, 10th, PUC, Degree, ITI, Diploma ಯುವಕ, ಯುವತಿಯರ ನೇರ ನೇಮಕಾತಿಗೆ ಬೇಕಾಗಿದ್ದಾರೆ. 18,000/- 60,000/- ವಸತಿ, ಊಟವಿರುತ್ತದೆ.
72595 52930

**WANTED TEACHER**
1) ಸಹ ಶಿಕ್ಷಕರು - D.Ed - 2
2) ಸಹ ಶಿಕ್ಷಕರು - NTC - 2
ದ್ವಿ ದರ್ಜೆ ಸಹಾಯಕರು - BA, B.Com - 1
4) ಆಯಾ - 7ನೇ Std - 1
NNP Convent, Nerlige, Dvg.
99011 54164, 95914 25649

**ಅಡುಗೆ ಮಾಡಲು ಬೇಕಾಗಿದ್ದಾರೆ**
ಅಡುಗೆ ಮಾಡಲು ತಿಳುವಳಿಕೆ ಇರುವವರು ಹೋಟೆಲ್ ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಸಂಬಳ, ಊಟ, ವಸತಿ ಇರುತ್ತದೆ.
87110 04905

**ಕಾರು ಮಾರಾಟಕ್ಕಿದೆ**
2010ನೇ ಮಾರುತಿ ಸುಜುಕಿ ಜೆನ್ ಎಸ್ಟಿಯೋ ಕಾರು ಮಾರಾಟಕ್ಕಿದೆ.
87110 04905

**LADY TEACHERS WANTED**
D.Ed - 4 Posts, Degree - 4 Posts, NTC 4 Posts.
Contact : Vidya Vikas Convent
Behind Aaraike Hospital, Davanagere.
9986617235

**CHANGE OF NAME**
I, Maheshwarappa Balappa Sangappa (Old Name) R/o. 3570/225, 3rd main, 3rd cross, Vinayaka Badavane, Vidyanagar, Davangere - 577 005.
I have Changed my name as Maheshwarappa Balapal Sangappa (New name) Vide Affidavit sowrn, before Davangere notary SRI M. Prathaparudra, Dt. : 12.06.2023 and in future all my dealings will be in my Name Name.
Place : Davangere, Date : 12.06.2023
Sd/- Mahewarappa Balapal Sangappa.

**CHANGE OF NAME**
I, U. MAHAENDRA NATH PATIL (Old Name) R/o 2036/3, 1st 'E' Cross, Opp. Maganur Basappa School, Taralabalu Badavane, Davangere-577 005. have changed my name as U. MAHENDRA NATH PATIL (New Name) vide affidavit sworn before Notary Davanagere dated 24.05.2023

**ಬೇಕಾಗಿದ್ದಾರೆ**
ಎಸ್.ಎನ್ ಎಂಟರ್‌ಪ್ರೈಸಸ್
ದಾವಣಗೆರೆ. ನಮ್ಮಲ್ಲಿ ಕೆಲಸಕ್ಕೆ ಯುವಕರು, ಬೇಕಾಗಿದ್ದಾರೆ.
ಸಂಬಳ : ಬೈಕ್ ಇದ್ದವರಿಗೆ 14,000, ಬೈಕ್ ಇಲ್ಲದವರಿಗೆ 13,000
8088495229, 7019339372

**ಕೆಲಸಕ್ಕೆ ಬೇಕಾಗಿದ್ದಾರೆ**
ಫರ್ಟಿಲೈಸರ್ಸ್ (ಗೊಬ್ಬರದ ಅಂಗಡಿ) ಅಂಗಡಿಯಲ್ಲಿ GST & ಟ್ಯಾಲಿಯಲ್ಲಿ ಐದು ವರ್ಷ ಅನುಭವವಿರುವ ಅಕೌಂಟೆಂಟ್ ಬೇಕಾಗಿದ್ದಾರೆ.
99861 46599
98804 88200

**WANTED**
House Keeping
9886158644
Davangere

**HOUSE FOR LEASE**
Independent house 3 BHK 5th main, 5th cross,St. Pauls Convent Road, PJ Extension , Davangere.
88616 89590

**WANTED**
We are Hirnig telecallers
Good Communication Skill.
Required : (Only for Girls, Womens)
Salary : 6000, 7000 (Under Graduates)
Salary : 8000, 9000, 10,000 (Post Graduates)
Contact : 95350 51589, 78670 75786
Office Location : Hasbahavi Circle, K.R Market, Davangere.

**ಬೇಕಾಗಿದ್ದಾರೆ**
ಶ್ರೀ ಬಸವ ಗುರುಕುಲ ಇಂಗ್ಲಿಷ್ ಮೀಡಿಯಂ ಶಾಲೆಗೆ
ಸೈನ್ಸ್ ಟೀಚರ್ ಬೇಕಾಗಿದ್ದಾರೆ. (ಹೈ ಸ್ಕೂಲ್) ಕುಂಬಳೂರು.
82172 15356

**ಬೇಕಾಗಿದ್ದಾರೆ**
1) Lady Security Guards
2) Security Guards
(ಊಟದ ವ್ಯವಸ್ಥೆ ಇರುತ್ತದೆ.)
ಸಂಪರ್ಕಿಸಿ.
S.T Somashekar
98803 37686


**German shepherd bush coated puppies for sale**
Contact :
94802 91397, 83106 03929

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**ಬೇಕಾಗಿದ್ದಾರೆ**
ಬೆಂಕಿ ಪೊಟ್ಟಣಗಳು ಹಾಗೂ ಅರಸನ್ ಡಿಟರ್ಜೆಂಟ್ಸ್ ಸೋಪು ಮಾರಾಟ ಮಾಡಲು ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ. ವಿಷನ್ ಕಂಪ್ಯೂಟರ್ಸ್
9742394900, 9886094900

**WANTED TEACHERS**
B.Sc, BCA - 2
B.Sc, B.Ed (MATHS) - 2,
BA,NTC - 1
Contact with Originals
99801 48289, 87468 95680

**New Apartment**
2 BHK, Few houses are available for Rent, Ready for immediate accupancy.
Please Contact:
98806 86882

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಇಂಡಸ್ಟ್ರೀಯಲ್ ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ನಗರದ ಮಧ್ಯ ಭಾಗಕ್ಕೆ ಅತೀ ಸಮೀಪವಿರುವ ಬಂಬೂಬಜಾರ್ ಪಕ್ಕದ ಬಸಾಪುರ ರಸ್ತೆಯಲ್ಲಿ ಸಣ್ಣ ಕಾರ್ಖಾನೆಗಳಿಗೆ ಮತ್ತು ಗೋಡೌನ್ ನಿರ್ಮಿಸಲು ದೂಡಾ ಅಪ್ರೂವಲ್ ಹೊಂದಿರುವ ಇಂಡಸ್ಟ್ರಿಯಲ್ ಸೈಟುಗಳು ದೊರೆಯುತ್ತವೆ. ಉತ್ತಮ ರಸ್ತೆ ಮತ್ತು ಪಾರ್ಕಿಂಗ್ ವ್ಯವಸ್ಥೆ ಒಳಗೊಂಡಿರುತ್ತದೆ.
98441 88191

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ROOM TO - LET**
Well furnished Room Vacant Near swimming Pool, MCC B Block, Ground floor with attached Bathroom.
99721 02927

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**CHIRNAJIVI ACADEMY**
IBPS, RRB Crash Course new Batch Starts on 15th June. Admissions started.
94900 00406, 63014 53621

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

## ಕರಾಟೆ ಪರೀಕ್ಷೆ ವಿಜೇತರಿಗೆ ಪ್ರಮಾಣಪತ್ರ



ದಾವಣಗೆರೆ,ಜೂ.12- ವಿದ್ಯಾನಗರ ಪಾರ್ಕ್‌ನಲ್ಲಿ ಕಳೆದ ಏಳೆಂಟು ವರ್ಷಗಳಿಂದ ಡ್ರಾಗನ್ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್ ಅಡಿಯಲ್ಲಿ ತರಬೇತಿ ನೀಡುತ್ತಿರುವ ಕರಾಟೆ ಮಾಸ್ಟರ್ ಸಾಧಿಕ್ ಬಾಷಾ ಅವರಿಂದ ತರಬೇತಿ ಪಡೆದ ಕರಾಟೆ ಪಟುಗಳಾದ ಎಂ.ಎಲ್.ಗಗನ್, ಕೆ.ಕೆ.ಚಂದು, ಆರ್. ಎಚ್. ಸಂಜನಾ, ಎಂ.ಪ್ರತಿಭಾ ಇವರುಗಳು 'ಬ್ಲಾಕ್ ಬೆಲ್ಟ್' ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ, ಅಂತರರಾಷ್ಟ್ರೀಯ ಕೇಂದ್ರ ಸಂಸ್ಥೆಯಿಂದ ಬ್ಲಾಕ್ ಬೆಲ್ಟ್ ಮತ್ತು ಸರ್ಟಿಫಿಕೆಟ್ ಪಡೆದಿದ್ದಾರೆ.

ಈ ಕರಾಟೆ ಪಟುಗಳಿಗೆ ವಿದ್ಯಾನಗರ ಪಾರ್ಕ್‌ನಲ್ಲಿ ಹಿರಿಯ ಪತ್ರಕರ್ತ ಲೇಖಕ ಬಾ.ಮ. ಬಸವರಾಜಯ್ಯ ಹಾಗೂ ಜಿಲ್ಲಾ ಕ.ಸಾ.ಪ. ಕಾರ್ಯದರ್ಶಿ ಬಿ. ದಿಳ್ಯಪ್ಪ ಅವರು ಸರ್ಟಿಫಿಕೇಟ್ ವಿತರಿಸಿ, ಅಭಿನಂದಿಸಿದರು.

## ಮಹಿಳೆಯರ ಹಾಸ್ಟೆಲ್ ಪ್ರವೇಶ ಪ್ರಾರಂಭ

ದಾವಣಗೆರೆ, ಜೂ.12- ಸ್ಥಳೀಯ ಸರಸ್ವತಿ ನಗರದಲ್ಲಿ ರುವ ಬಸವ ಮಹಾಮನೆ ಯಿಂದ 2023-24ನೇ ಸಾಲಿನ ಬಸವ ಬಳಗ ಪ್ರಸಾದ ಮತ್ತು ವಸತಿ ನಿಲಯ ವಿದ್ಯಾರ್ಥಿನಿ ಯರ ಪ್ರಸಾದ ನಿಲಯ (ಹಾಸ್ಟೆಲ್) ಪ್ರಾರಂಭ ವಾಗಿದೆ. ಆಸಕ್ತ ವಿದ್ಯಾರ್ಥಿನಿ ಯರು ವಿವರ ಗಳಿಗೆ 7337737884, 9880555916 ಸಂಖ್ಯೆಗಳಿಗೆ ಸಂಪರ್ಕಿಸಲು ವಾರ್ಡನ್ ಪಿ.ಎಂ. ಮಹಾರುದ್ರ ತಿಳಿಸಿದ್ದಾರೆ.

# ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶಿಕ್ಷಣವೇ ಅಸ್ತ್ರ

### ವಿಶ್ವ ಬಾಲಕಾರ್ಮಿಕ ಪದ್ದತಿ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್

ದಾವಣಗೆರೆ, ಜೂ.12- ಮಕ್ಕಳು ಸಮಾಜದ ಆಸ್ತಿ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಶಿಕ್ಷಣದಿಂದಲೇ ಸಾಧ್ಯ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ತಿಳಿಸಿದರು.

ಸೋಮವಾರ ಜಿಲ್ಲಾಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸಂಸ್ಥೆ, ಜಿಲ್ಲಾ ವಕೀಲರ ಸಂಘ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ನಗರದ ಮಿಲ್ಲತ್ ಮಹಾವಿದ್ಯಾಲಯದಲ್ಲಿ ಜರುಗಿದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲರಿಗೂ ಸಾಮಾಜಿಕ ನ್ಯಾಯ, ಬಾಲ ಕಾರ್ಮಿಕ ಪದ್ಧತಿ ಕೊನೆಗಾಣಲಿ ಎಂಬ ಘೋಷವಾಕ್ಯದೊಂದಿಗೆ ಕಾರ್ಮಿಕ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತಿದೆ. ವಿಶ್ವದ ಅನೇಕ ಕಡೆ ಬಾಲ ಕಾರ್ಮಿಕ ಪದ್ಧತಿ ಜಾರಿಯಲ್ಲಿದೆ. 2000 ನೇ ಇಸವಿಯಲ್ಲಿ ಪ್ರಪಂಚದಲ್ಲಿ ಶೇ



16 ರಷ್ಟು ಬಾಲ ಕಾರ್ಮಿಕ ಪದ್ಧತಿ ಇದ್ದು ಇದು 2020ರ ವೇಳೆಗೆ 9.6 ಕ್ಕೆ ಇಳಿಕೆಯಾಗಿದೆ.

ಕೇಂದ್ರ ಕಾರ್ಮಿಕ ಇಲಾಖೆ ಅಂಕಿ-ಅಂಶದನ್ವಯ ದೇಶದಲ್ಲಿ ಹೆಚ್ಚು ಬಾಲಕಾರ್ಮಿಕ ಪದ್ಧತಿಯನ್ನು ಹೊಂದಿರುವ ರಾಜ್ಯ ಕರ್ನಾಟಕ ಮತ್ತು ನಂತರದ ಸ್ಥಾನ ತಮಿಳುನಾಡು ಆಗಿರುತ್ತದೆ. ಕೋವಿಡ್ ಪರಿಣಾಮ ಆರ್ಥಿಕ ಹಿಂಜರಿತದಿಂದಾಗಿ ಹಲವಾರು ಜನ ನಿರುದ್ಯೋಗಿಗಳಾಗಿದ್ದು ಇದರಿಂದಲೂ ಬಾಲ ಕಾರ್ಮಿಕರು ಹೆಚ್ಚಾಗಲು ಕಾರಣವಾಗಿದೆ. ಆದರೆ ಬಾಲ ಕಾರ್ಮಿಕ ಪದ್ಧತಿ ಕಾನೂನಿನ್ವಯ ಅಪರಾಧವಾಗಿದ್ದು, ಇವರನ್ನು ದುಡಿಸಿಕೊಳ್ಳದೇ ಎಲ್ಲಾ ಮಕ್ಕಳಿಗೂ ಶಿಕ್ಷಣ ಹಾಗೂ ಜೀವಿಸುವ ನೆಲೆಯನ್ನು ಕಲ್ಪಿಸಿಕೊಡಬೇಕಾಗಿದೆ ಎಂದರು.

ವಿದ್ಯಾರ್ಥಿಗಳು, ಅಧಿಕಾರಿಗಳು, ನೌಕರರು ಅಥವಾ ಸಾರ್ವಜನಿಕರಿಗೆ ಬಾಲ ಕಾರ್ಮಿಕರು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಬಹುದು ಎಂದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ಸಾಬ್ ಮಾತನಾಡಿ, ಒಂದು ದೇಶ ಅಭಿವೃದ್ಧಿ ಹೊಂದಬೇಕಾದರೆ, ಆ ದೇಶ ಬಾಲ ಕಾರ್ಮಿಕತೆಯಿಂದ ಮುಕ್ತವಾಗಿರಬೇಕು. ಕರ್ನಾಟಕದಲ್ಲಿ ಪ್ರತಿ 10 ಮಕ್ಕಳಲ್ಲಿ ಒಬ್ಬರಂತೆ ಬಾಲಕಾರ್ಮಿಕರಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಪದ್ಧತಿ ಕಡಿಮೆಯಾಗಿದೆ. ಈ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ಮುಕ್ತಗೊಳಿಸಲು ಇಲಾಖೆಗಳಲ್ಲದೇ ಸಮಾಜವು ಕೈ ಜೋಡಿಸಬೇಕು ಎಂದರು.

18 ವರ್ಷದೊಳಗಿನ ಎಲ್ಲಾ ಮಕ್ಕಳೇ, ಅವರಿಂದ ದುಡಿಸಿಕೊಳ್ಳುವುದು ಹಾಗೂ ಪೋಷಕರು ಅವರನ್ನು ಬೆಂಬಲಿಸುವುದು ಶಿಕ್ಷಾರ್ಹ ಅಪರಾಧ, ಮಕ್ಕಳು ಮೊಬೈಲ್ ಗೀಳಿಗೆ ಒಳಗಾಗದೇ ಶಿಕ್ಷಣದ ಕಡೆ ಗಮನಹರಿಸಬೇಕು ಎಂದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಗೊಂಡ ಬಸರಗಿ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸಂಸ್ಥೆಯ ಯೋಜನಾ ನಿರ್ದೇಶಕ ಇ. ಎನ್. ಪ್ರಸನ್ನಕುಮಾರ, ಶಿಕ್ಷಣಾಧಿಕಾರಿ ಅಂಬಣ್ಣ, ಆರೋಗ್ಯ ಇಲಾಖೆಯ ಮುರುಳಿಧರ್, ಮಿಲ್ಲತ್ ಮಹಾವಿದ್ಯಾಲಯದ ಆಡಳಿತಾಧಿಕಾರಿ ಸೈಯದ್ ಅಲಿ ಉಪಸ್ಥಿತರಿದ್ದರು.



## ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ : ಜಾಗೃತಿ ಜಾಥಾ

**ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಜಾಗೃತಿ ಮೂಡಿಸುವ ಜಾಥಾಗೆ ಜೆ.ಎಂ.ಎಫ್.ಸಿ ಹಾಗೂ ಜಿಲ್ಲಾ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಅಪ್ತಾಬ್ ಮತ್ತು 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಪ್ರಶಾಂತ್ ಜಿ.ಸಿ ಚಾಲನೆ ನೀಡಿದರು. ಮಕ್ಕಳಿಗೆ ಶಿಕ್ಷಣ ಕೊಡಿ, ಶಿಕ್ಷೆ ಕೊಡಬೇಡಿ, ಇಂದಿನ ಮಕ್ಕಳೇ ನಾಳಿನ ದೇಶದ ಭವಿಷ್ಯ, ಬೆಳೆಯಲಿ ಶಿಕ್ಷಣದ ಮೊಗ್ಗು ಚಿಗುರಲಿ ಎಂಬ ಘೋಷವಾಕ್ಯಗಳನ್ನು ಕೂಗುತ್ತಾ ಭಾಷಾನಗರ, ಮಂಡಕ್ಕಿ ಭಟ್ಟಿ ಮೂಲಕ ಜಾಥಾವು ಮಿಲ್ಲತ್ ವಿದ್ಯಾಲಯದಲ್ಲಿ ಸಮಾಪನೆಗೊಂಡಿತು.**

## ಜುಲೈ 12ರಂದು ಚಂದ್ರಯಾನ – 3ಕ್ಕೆ ಸಿದ್ಧತೆ

ಕೊಟ್ಟಾಯಂ, ಜೂ. 12 – ಎಲ್ಲಾ ಪರೀಕ್ಷೆಗಳು ಸುಲಲಿತವಾಗಿ ಪೂರ್ಣಗೊಂಡಲ್ಲಿ ಬರುವ ಜುಲೈ 12ರಿಂದ 19ರ ನಡುವೆ ಮೂರನೇ ಚಂದ್ರಯಾನ ಕೈಗೊಳ್ಳಲಾಗುವುದು ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಮುಖ್ಯಸ್ಥ ಎಸ್. ಸೋಮನಾಥ್ ತಿಳಿಸಿದ್ದಾರೆ. ಚಂದ್ರಯಾನವನ್ನು ಈಗಾಗಲೇ ಶ್ರೀಹರಿಕೋಟಾದಲ್ಲಿರುವ ಉಡಾವಣಾ ತಾಣಕ್ಕೆ ತರಲಾಗಿದೆ. ಅಂತಿಮ ಹಂತದ ಸಿದ್ಧತೆಗಳು ನಡೆಯುತ್ತಿವೆ ಎಂದು ಸೋಮನಾಥ್ ಹೇಳಿದ್ದಾರೆ.

## ನೀಲಾನಹಳ್ಳಿಯಲ್ಲಿ ಎನ್ನೆಸ್ಸೆಸ್ ಶಿಬಿರ

ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜು ವತಿಯಿಂದ ಬಾತಿ ಬಳಿಯ ನೀಲಾನಹಳ್ಳಿಯಲ್ಲಿ ಇಂದು ಬೆಳಿಗ್ಗೆ 8 ಕ್ಕೆ ಎನ್‌ಎಸ್‌ಎಸ್ ಶಿಬಿರ ನಡೆಯಲಿದೆ.

## ಎಸ್ಸೆಸ್ ಜನ್ಮ ದಿನ : 16 ರಂದು ವಿವಿಧ ಸೇವಾ ಕಾರ್ಯಕ್ರಮ

ದಾವಣಗೆರೆ, ಜೂ. 12- ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ 93 ನೇ ಜನ್ಮ ದಿನಾಚರಣೆ ಅಂಗವಾಗಿ ಇದೇ ದಿನಾಂಕ 16 ರಂದು ಜಿಲ್ಲಾ ಕಾಂಗ್ರೆಸ್ ಹಾಗೂ ಎಸ್ಸೆಸ್ ಅಭಿಮಾನಿಗಳ ವತಿಯಿಂದ ನಗರದಲ್ಲಿ ವಿವಿಧ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಎಸ್ಸೆಸ್ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ಅನಾಥಾಶ್ರಮ, ವೃದ್ಧಾಶ್ರಮದ ವಾಸಿಗಳಿಗೆ ನಿತ್ಯ ಬಳಕೆ ವಸ್ತುಗಳು ಹಾಗೂ ವಿಕಲಚೇತನ ಮಕ್ಕಳಿಗೆ ಅಗತ್ಯ ಪರಿಕರಗಳನ್ನು ವಿತರಿಸಲಾಗುವುದು ಎಂದರು.

ಗೋಶಾಲೆಯ ಗೋವುಗಳಿಗೆ ಮೇವು ವಿತರಣೆ, ನಿರಾಶ್ರಿತ ಕೇಂದ್ರಗಳಲ್ಲಿ ವಾಸಿಸುವ ವರಿಗೆ ಅನ್ನ ಸಂತರ್ಪಣೆ, ರಕ್ತದಾನ ಶಿಬಿರ ಹಾಗೂ ಸಸಿ ನೆಡುವ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ನಗರದ ಎಸ್ಸೆಸ್ ಅಭಿಮಾನಿಗಳು ಆಯಾ ವಾರ್ಡ್‌ಗಳಲ್ಲೂ ಕೂಡ ವಿವಿಧ ಸೇವಾ ಕಾರ್ಯ ಕ್ರಮಗಳನ್ನು ಆಯೋಜಿಸಿಕೊಂಡಿದ್ದಾರೆಂದು ಹೇಳಿದರು.

**ವಿಶೇಷ ಕಾರ್ಯಕ್ರಮ:** ಎಸ್ಸೆಸ್ ಅವರ 93 ನೇ ಜನ್ಮ ದಿನದ ಪ್ರಯುಕ್ತ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 93 ಜನ ಹಿರಿಯರು, ಮಹಿಳೆಯರು ಹಾಗೂ ಪಕ್ಷದ ಕಾಂಗ್ರೆಸ್ ಮುಖಂಡರನ್ನು ಸನ್ಮಾನಿಸಲಾಗುವುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಗಡಿಗುಡಾಳ್ ಮಂಜುನಾಥ್, ಎಸ್. ಮಲ್ಲಿಕಾರ್ಜುನ್, ಶ್ರೀಕಾಂತ್ ಬಗರೆ, ರಾಜು ಭಂಡಾರಿ, ಮಹಿಳಾ ಮುಖಂಡರಾದ ದಾಕ್ಷಾಯಣಮ್ಮ, ಕವಿತಾ ಚಂದ್ರಶೇಖರ್, ಶುಭಮಂಗಳ, ರಾಜೇಶ್ವರಿ ಮತ್ತಿತರರು ಉಪಸ್ಥಿತರಿದ್ದರು.

### ಇಂದಿನಿಂದ ಎಸ್.ಎಸ್. ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ



ದಾವಣಗೆರೆ, ಜೂ.12- ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳು ಮತ್ತು ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಅವರ 93 ನೇ ಹುಟ್ಟು ಹಬ್ಬದ ಪ್ರಯುಕ್ತ ಎಸ್.ಎಸ್.ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಇಂದಿನಿಂದ ಇದೇ ದಿನಾಂಕ 19 ರವರೆಗೆ ಸಾಮಾನ್ಯ ಮತ್ತು ಬಡ ಜನರಿಗೆ ಉಚಿತ, ರಿಯಾಯಿತಿ ದರದಲ್ಲಿ ಆರೋಗ್ಯ ಸೇವೆಯನ್ನು ನೀಡಲಾಗುವುದು.

ವಾರ್ಡ್ ಬಾಡಿಗೆ, ವೈದ್ಯರ ಸೇವೆ, ಜ್ಯೂನಿಯರ್ ವೈದ್ಯರ ಸೇವೆ, ದಾದಿಯರ ಸೇವೆ, ಪ್ರಯೋಗಾಲಯಗಳ ಪರೀಕ್ಷೆಗಳಾದ ಸಿಬಿಸಿ, ಆರ್.ಎಫ್.ಟಿ, ಎಲ್.ಎಫ್.ಟಿ, ಈಸಿಜಿ, ಕ್ಷ-ಕಿರಣ ಪರೀಕ್ಷೆಗಳು ಸಂಪೂರ್ಣ ಉಚಿತವಾಗಿವೆ. ಉಚಿತ ಯು.ಎಸ್.ಜಿ. ಆಡ್ಬೋಮನ್ ಮತ್ತು ಪೆಲ್ವೀಸ್, ಶಸ್ತ್ರ ಚಿಕಿತ್ಸೆಯಲ್ಲಿ ಶೇ 50 ರಷ್ಟು ರಿಯಾಯಿತಿ, ಪ್ರಯೋಗಾಲಯ ಪರೀಕ್ಷೆ, ಕ್ಷ-ಕಿರಣ ಸೇವೆಗಳಲ್ಲಿ ಮೇಲೆ ತಿಳಿಸಿರುವ ಸೇವೆಗಳನ್ನು ಹೊರತುಪಡಿಸಿ, ಇತರೆ ಸೇವೆಗಳಿಗೆ ವಿನಾಯಿತಿ ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ. ಔಷಧಗಳಿಗೆ ಯಾವುದೇ ತರಹದ ರಿಯಾಯಿತಿ ಇರುವುದಿಲ್ಲ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರು ತಿಳಿಸಿದ್ದಾರೆ.

# ನೆಲ, ಜಲ, ಪರಿಸರ ಸಂರಕ್ಷಣೆ ತುರ್ತು ಸಭೆ ಕರೆಯಲು ಒತ್ತಾಯ

### ಕೆರೆ ಸಂರಕ್ಷಣಾ ಆಂದೋಲನಾ ರಾಜ್ಯ ಸಂಚಾಲಕ ಬಲ್ಲೂರು ರವಿಕುಮಾರ್ ಒತ್ತಾಯ

ದಾವಣಗೆರೆ, ಜೂ. 12- ಜಿಲ್ಲೆಯ ತಾಲ್ಲೂಕುಗಳ ನೆಲ, ಜಲ, ಪರಿಸರ, ಕೆರೆ ಸಂರಕ್ಷಣಾ ವಿಚಾರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ತುರ್ತು ಸಭೆ ಕರೆಯುವಂತೆ ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಸಿಇಓ ಅವರನ್ನು ನೆಲ, ಜಲ, ಪರಸರ ಹಾಗೂ ಕೆರೆ ಸಂರಕ್ಷಣಾ ಆಂದೋಲನಾ ರಾಜ್ಯ ಸಂಚಾಲಕ ಬಲ್ಲೂರು ರವಿಕುಮಾರ್ ಒತ್ತಾಯಿಸಿದ್ದಾರೆ.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2021 ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಳೆಗಾಲದ ನಾಲ್ಕು ತಿಂಗಳಲ್ಲಿ ಪರಿಸರ ಸಂರಕ್ಷಣೆ, ಸಸಿ ನೆಡಲು ಸರ್ಕಾರಿ ಇಲಾಖೆಗಳು ಹಾಗೂ ಸಂಘ-ಸಂಸ್ಥೆಗಳು, ಪರಿಸರ ಆಸಕ್ತರನ್ನು ಒಳಗೊಂಡ ಸಭೆ ಕರೆಯಲಾಗಿತ್ತು. ಆದರೆ ಸಭಾ ನಡಾವಳಿಯಂತೆ ಸಭೆ ಮಾತ್ರ ನಡೆಯಿತು. ಯಾವುದೇ ಕಾರ್ಯಗಳನ್ನು ಅನುಷ್ಠಾನಕ್ಕೆ ತರಲಾಗಲಿಲ್ಲ ಎಂದರು.

ಜಿಲ್ಲೆಯಲ್ಲಿ 477 ಕೆರೆಗಳಿದ್ದು, ಸುಮಾರು 177 ಕೆರೆಗಳು ಒತ್ತುವರಿಯಾಗಿವೆ. ಉಚ್ಚನ್ಯಾಯಾಲಯದ ಆದೇಶವಿದ್ದರೂ ಸಹ ಸಂಬಂಧಿಸಿದ ಇಲಾಖೆಗಳು ಜಾಣ ಕುರುಡರಂತೆ ವರ್ತಿಸುತ್ತಿದ್ದು, ಈ ವಿಚಾರದಲ್ಲಿ ಕರ್ತವ್ಯಲೋಪ ಎಸಗಲಾಗಿದೆ ಎಂದು ಆರೋಪಿಸಿದರು.

ಅರಣ್ಯ ಇಲಾಖೆಯವರು ಸಸಿಗಳನ್ನು ವಿತರಣೆ ಮಾಡಿರುವುದು ಸರಿಯಷ್ಟೆ. ಅವುಗಳನ್ನು ನೆಟ್ಟಿರುವ ಹಾಗೂ ಪೋಷಿಸಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಹೇಳಿದರು.

ಮಳೆಗಾಲದಲ್ಲಿ ನಮ್ಮ ಜಿಲ್ಲೆಯಲ್ಲಿ ಎರಡು ಲಕ್ಷ ಸಸಿಗಳ ವಿತರಣೆ ಆಗಿದ್ದು, ಅದರಲ್ಲಿ ಬೆಳೆದ ಮರಗಳೆಷ್ಟು, ಬೆಳೆಯದೇ ಇರುವ ಸಸಿಗಳೆಷ್ಟು ಎಂಬುದರ ಬಗ್ಗೆ ಸಹ ಮಾಹಿತಿ ಇಲ್ಲ.

ಕೆರೆಗಳ ಒತ್ತುವರಿಯಿಂದಾಗಿ 10 ಟಿಎಂಸಿಯಷ್ಟು ನೀರಿನ ಕೊರತೆಯಾಗಿ, ಅಂತರ್ಜಲ ಬತ್ತಿ ಹೋಗಿರುತ್ತದೆ ಎಂದರು.

ನೆಲ, ಜಲ, ಪರಿಸರ ಸಂರಕ್ಷಣೆ ಕುರಿತು ತುರ್ತುಸಭೆ ಕರೆದು ಚರ್ಚಿಸಲು ರವಿಕುಮಾರ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕೆ.ಎಸ್. ಪ್ರಸಾದ್, ಅಣಬೇರು ಕುಮಾರಸ್ವಾಮಿ, ಮಾಯಕೊಂಡ ಅಶೋಕ, ಕರೇಕಟ್ಟೆ ಧೂಳೇರ ಗದಿಗೇಶ, ಜಯನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

## ಎವಿಕೆ ಕಾಲೇಜಿನಿಂದ ಇಂದಿನಿಂದ ಎನ್‌ಎಸ್‌ಎಸ್ ಶಿಬಿರ

ದಾವಣಗೆರೆಯ ಎ.ವಿ. ಕಮಲಮ್ಮ ಮಹಿಳಾ ಕಾಲೇಜು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕ-1 ಮತ್ತು 2 ಇವರ ಸಂಯುಕ್ತಾಶ್ರಯದಲ್ಲಿ 'ಯುವಜನತೆಯ ನಡೆ-ಗ್ರಾಮ ಸ್ವಚ್ಛತೆಯ ಕಡೆ' ಘೋಷವಾಕ್ಯದಡಿ ಇಂದಿನಿಂದ ಇದೇ ದಿನಾಂಕ 19ರವರೆಗೆ ದಾವಣಗೆರೆ ತಾಲ್ಲೂಕಿನ ಹೊಸಬೆಳವನೂರು ಗ್ರಾಮದಲ್ಲಿ ವಿಶೇಷ ವಾರ್ಷಿಕ ಶಿಬಿರವನ್ನು ಆಯೋಜಿಸಲಾಗಿದೆ.

ಸಂಜೆ 6 ಗಂಟೆಗೆ ಆರಂಭವಾಗುವ ಕಾರ್ಯಕ್ರಮವನ್ನು ಬಾಪೂಜಿ ವಿದ್ಯಾಸಂಸ್ಥೆಯ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲೆ ಕಮಲಾ ಸೊಪ್ಪಿನ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದ ಸಂಯೋಜನಾಧಿಕಾರಿ ಡಾ. ಅಶೋಕ್ ಕುಮಾರ್ ವಿ. ಪಾಳೇದ್, ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ, ಗ್ರಾ.ಪಂ. ಅಧ್ಯಕ್ಷರಾದ ಟಿ.ಎ. ಅಶು, ಪಿಡಿಓ ಪಿ.ಟಿ. ರೇವತಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ನಂತರ ಜೂ.14ರಿಂದ 18ರವರೆಗೆ ವಿವಿಧ ಸೇವಾ ಕಾರ್ಯಕ್ರಮಗಳು ನಡೆಯಲಿದ್ದು, ಜೂ.19ರಂದು ಸಂಜೆ 6 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಗ್ರಾ.ಪಂ. ಸದಸ್ಯೆ ಎಂ.ಪಿ. ನವೀನ್ ಕುಮಾರ್ ವಹಿಸಲಿದ್ದಾರೆ. ಡಾ. ಎನ್. ವೀಣಾ ಅವರು ಸಂವಿಧಾನ ಮತ್ತು ಮಹಿಳಾ ಸಬಲೀಕರಣದ ಕುರಿತು ಮತ್ತು ಸಹಾಯಕ ಪ್ರಾಧ್ಯಾಪಕಿ ಡಾ. ಆರ್.ಜಿ. ಕವಿತಾ 'ಸ್ತ್ರೀವಾದಿ ಸಾಹಿತ್ಯ' ದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎ.ಎನ್. ಬಸವರಾಜ್, ಬಿ.ಆರ್. ನಾಗರಾಜ್, ಜಿ.ಸಿ. ಬಸವನಗೌಡ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೂ ಮುನ್ನ ಬೆಳಿಗ್ಗೆ 9 ಗಂಟೆಗೆ ಜಾನುವಾರುಗಳ ಉಚಿತ ತಪಾಸಣೆ ಹಮ್ಮಿಕೊಳ್ಳಲಾಗಿದೆ.

## ಬಳಕೆಯಾಗದ ಪಿಎಂಜೆವಿಕೆಯ 4,500 ಕೋಟಿ ರೂ.

ನವದೆಹಲಿ, ಜೂ. 12 – ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಪ್ರಧಾನ ಮಂತ್ರಿ ಜನ ವಿಕಾಸ್ ಕಾರ್ಯಕ್ರಮ (ಪಿ.ಎಂ.ಜೆ.ವಿ.ಕೆ.) ಯೋಜನೆಯ 4,500 ಕೋಟಿ ರೂ. ಮೊತ್ತ ರಾಜ್ಯಗಳ ಬಳಿ ಬಳಕೆಯಾಗದೇ ಉಳಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಸರ್ಕಾರಗಳು ಈ ಹಣ ಬಳಕೆ ಮಾಡಿಕೊಂಡು, ಆ ಕುರಿತು ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಹೊಸದಾಗಿ ಹಣ ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಿ.ಎಂ.ಜೆ.ವಿ.ಕೆ. ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ಇದರ ಮೂಲಕ ನಿರ್ದಿಷ್ಟ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾ ಗುವುದು. 2018ರ ಮೇ ತಿಂಗಳಿನಿಂದ ಈ ಯೋಜನೆ ಜಾರಿಗೆ ತರಲಾಗಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನ, ನಿಟ್ಟುವಳ್ಳಿ, ರಾಷ್ಟ್ರೋತ್ಥಾನ ಶಾಲೆ, ಮಣಿಕಂಠ ಸರ್ಕಲ್, ಶ್ರೀ ರಾಮ ಬಡಾವಣೆ, ಕರಿಯಮ್ಮ ದೇವಸ್ಥಾನ, ಜಯನಗರ ಎ ಬ್ಲಾಕ್ ಮತ್ತು ಬಿ ಬ್ಲಾಕ್, ನಿಟ್ಟುವಳ್ಳಿ ಆಂಜನೇಯ ದೇವಸ್ಥಾನ, ನಿಟ್ಟುವಳ್ಳಿ ಖಾದಿ ಭಂಡಾರ, ಭಗಿರಥ ಸರ್ಕಲ್, ಜಯನಗರ ಚರ್ಚ್ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ವೃತ್ತಿಯಲ್ಲಿ ಸೇವಾ ಮನೋಭಾವವಿದ್ದರೆ ಕರುಣೆಯ ಕರ್ನಾಟಕ ಕಟ್ಟಲು ಸಾಧ್ಯ

### ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಮಹಿಮಾ ಪಟೇಲ್ ಅಭಿಮತ

ದಾವಣಗೆರೆ, ಜೂ. 12- ಯಾವುದೇ ವೃತ್ತಿಯಾಗಲೀ ಸೇವೆಯ ಹಿನ್ನೆಲೆಯಲ್ಲಿ ಮಾಡಿದರೆ ಕರುಣೆ ತುಂಬಿರುವ ಕರ್ನಾಟಕ ಕಟ್ಟಲು ಸಾಧ್ಯ ಎಂದು ಮಾಜಿ ಶಾಸಕ ಮಹಿಮಾ ಪಟೇಲ್ ಅಭಿಪ್ರಾಯಪಟ್ಟರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧಿ ಮಾಧ್ಯಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜಕಾರಣಿ, ವಕೀಲ, ವೈದ್ಯ, ಪತ್ರಕರ್ತ ಸೇರಿ ಎಲ್ಲರಲ್ಲೂ ಹಣದ ಭೂತ ಬೆನ್ನತ್ತಿದೆ. ಎಲ್ಲರೂ ಭದ್ರತೆಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಸೇವೆ ಹಿನ್ನೆಲೆಯಲ್ಲಿ ಕೆಲಸ ಮಾಡಿದರೆ ಅದು ರಾಜಕಾರಣವಲ್ಲ ಎಂಬ ಪರಿಸ್ಥಿತಿ ಇದೆ. ಯಾವುದೇ ಕೆಲಸ ಮಾಡಿದರೂ ಅದರಲ್ಲಿ ಸೇವಾ ಮನೋಭಾವ ಇದ್ದರೆ ಮರ್ಯಾದೆ ಸಿಗುತ್ತದೆ ಎಂದರು.

ಎಲ್ಲರೂ ಅವರ ಕುಟುಂಬ, ಜಾತಿಯ ಬಗ್ಗೆ ಆಲೋಚನೆ ಮಾಡುತ್ತಾರೆ. ಆದರೆ ಸಕಲ ಜೀವರಾಶಿಗಳಿಗೆ ಒಳಿತಾಗಲಿ ಎಂದು ಯೋಚನೆ ಮಾಡುವವರು ಕಡಿಮೆ. ಬಹುತೇಕರು ಬುದ್ಧಿವಾದ ಹೇಳಿಕೊಂಡು ದೈಹಿಕ ಶ್ರಮ



ಪಡದೇ ಸುಲಭವಾಗಿ ಹಣ ಪಡೆಯುವ ಆಲೋಚನೆಯಲ್ಲಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಪತ್ರಕರ್ತರ ಕರ್ತವ್ಯಗಳು ಸರ್ವರ ಕಲ್ಯಾಣಕ್ಕೆ ಬಳಕೆಯಾಗಬೇಕು. ಶೇ. 90ರಷ್ಟು ಸಕಾರಾತ್ಮಕ ಕಾರ್ಯಗಳು ನಡೆದರೂ ಮಾಧ್ಯಮಗಳು ಶೇ. 10ರಷ್ಟು ಇರುವ ನಕಾರಾತ್ಮಕ ಕಾರ್ಯಗಳನ್ನೇ ವೈಭವೀಕರಿಸುತ್ತಿವೆ. ಹಗರಣ, ಅಪರಾಧ, ರಾಜಕೀಯ ವಾದ-ವಿವಾದಗಳಿಗೆ ಆದ್ಯತೆ ನೀಡುವ ಬದಲು ಒಳ್ಳೆಯ ಸುದ್ದಿಗಳಿಗೆ ಆದ್ಯತೆ ನೀಡಬೇಕು. ಇದು ಇಂದಿನ ಅಗತ್ಯ ಎಂದು ಸರ್ವೋದಯಕ್ಕಾಗಿ ಪತ್ರಕರ್ತರ ಕರ್ತವ್ಯಗಳು ವಿಷಯದ ಬಗ್ಗೆ ಮಾತನಾಡಿದ ಹಿರಿಯ ಪತ್ರಕರ್ತ ಸಿದ್ದಯ್ಯ ಹಿರೇಮಠ ಹೇಳಿದರು.

ದೂರದರ್ಶನದ ಎ.ಎಲ್.ತಾರಾನಾಥ್, ಛಾಯಾಗ್ರಾಹಕ ಎಲ್. ವಿವೇಕ್ ಬದ್ದಿ, ಮುದ್ರಣ ವಿಭಾಗದ ಎಂ. ನಾಗರಾಜ್, ತಂತ್ರಜ್ಞರ ವಿಭಾಗದಲ್ಲಿ ಬುಡೇನ್ ಸಾಬ್ ಹಾಗೂ ಹಿರಿಯ ಪತ್ರಿಕಾ ವಿತರಕ ಎ.ಕೆ. ಶಿವಬಸಪ್ಪ ಅವರುಗಳಿಗೆ ಮಹಾತ್ಮ ಗಾಂಧಿ ಮಾಧ್ಯಮ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಧ್ಯಕ್ಷ ಡಾ. ಹೆಚ್.ಎನ್. ಮಲ್ಲಿಕಾರ್ಜುನ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

# ಪಾಲಿಕೆ ಪ್ರತಿ ವಾರ್ಡ್‌ನಲ್ಲೂ ಇಂದಿರಾ ಕ್ಯಾಂಟೀನ್ ಆರಂಭ

### ನಗರ ಸಂಸ್ಥೆಗಳಿಂದ ವೆಚ್ಚದ ಶೇ.30ರಷ್ಟು ಪಾವತಿ

ಬೆಂಗಳೂರು ಜೂ.12- ರಾಜ್ಯಾ ದ್ಯಂತ ಇಂದಿರಾ ಕ್ಯಾಂಟೀನ್‌ಗ ಳನ್ನು ಪುನರಾರಂಭಿಸುವುದಾಗಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಜಿಲ್ಲಾಡಳಿತ ಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಸೇರಿದಂತೆ, ಮಹಾನಗರ ಪಾಲಿಕೆಗಳ ಪ್ರತಿ ವಾರ್ಡ್‌ನ ಲ್ಲೂ ಕ್ಯಾಂಟೀನ್ ಆರಂಭಿ ಸುವಂತೆ ಆದೇಶಿಸಿದ್ದೇನೆ ಎಂದರು.

ಕ್ಯಾಂಟೀನ್ ಆರಂಭಕ್ಕೂ ಮುನ್ನ ಸಮಗ್ರ ವರದಿಯನ್ನು ಪಡೆದು ಅದರ ಆಧಾರದ ಮೇಲೆ ಉತ್ತಮ ಗುಣಮಟ್ಟದ ಆಹಾರ ಪೂರೈಕೆಗೆ ಕ್ರಮ ಕೈಗೊಳ್ಳಲಾಗುವುದು.

ಕ್ಯಾಂಟಿನ್ ನಡೆಸುವುದರಿಂದ ಪಾಲಿಕೆಗಳ ಮೇಲೆ ಹೊರೆ ಬೀಳಬಾರದು ಎಂಬ ಉದ್ದೇಶದಿಂದ ಬೆಂಗಳೂರಲ್ಲಿ ಸರ್ಕಾರ ಶೇ.50ರಷ್ಟು, ಉಳಿದದ್ದು, ಬಿಬಿಎಂಪಿ ಭರಿಸಬೇಕು ಎಂದು ಹೇಳಿದರು. ಉಳಿದೆಡೆ ಸರ್ಕಾರ ಶೇ.70ರಷ್ಟು, ಉಳಿದ ವೆಚ್ಚವನ್ನು ಆಯಾ ಸ್ಥಳೀಯ ಸಂಸ್ಥೆಗಳೇ ಭರಿಸಬೇಕಾಗುತ್ತದೆ ಎಂದರು. ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ವಿಕೇಂದ್ರೀಕರಣ ಗೊಳಿಸಿ 8 ವಲಯಗಳಲ್ಲಿ ಟೆಂಡರ್ ಕರೆಯಲು ಸೂಚಿಸಲಾಯಿತು. ಪಾರದರ್ಶ ಕತೆ ಕಾಯ್ದುಕೊಳ್ಳಬೇಕು. ಸ್ವಚ್ಛತೆ, ಗುಣ ಮಟ್ಟ ಹಾಗೂ ಪ್ರಮಾಣದಲ್ಲಿ ಯಾವುದೇ ರಾಜೀ ಮಾಡಬಾರದು. ಉತ್ತರ ಕರ್ನಾಟಕ ದಲ್ಲಿ ಸ್ಥಳೀಯ ಆಹಾರ ಒದಗಿಸಬೇಕು ಎಂದು ಮುಖ್ಯಮಂತ್ರಿ ಹೇಳಿದರು.

ಸಚಿವರು, ಶಾಸಕರನ್ನು ಉಪಹಾರ ಸ್ವೀಕರಿಸಲು ಆಹ್ವಾನಿಸಿ. ಗುಣಮಟ್ಟ ಕಾಪಾಡಲು ಅನುಕೂಲ. ಕಾಲೇಜು, ಆಸ್ಪತ್ರೆ, ಬಸ್ ನಿಲ್ದಾಣ, ತಾಲ್ಲೂಕು ಕಚೇರಿಗಳಂತಹ ಜನ ಸೇರುವ ಸ್ಥಳಗಳಲ್ಲಿ ಹೊಸ ಇಂದಿರಾ ಕ್ಯಾಂಟೀನ್ ಸ್ಥಾಪಿಸುವ ಕುರಿತು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು ಎಂದು ಮುಖ್ಯಮಂತ್ರಿ ಹೇಳಿದರು.

ನಲಂದ ವಿದ್ಯಾನಿಕೇತನ
ಶಿಕ್ಷಕಿಯರು ಬೇಕಾಗಿದ್ದಾರೆ
ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡಲು
BA, B.Sc, B.Ed, B.Com
ವಿದ್ಯಾರ್ಹತೆ ಉಳ್ಳ ಶಿಕ್ಷಕಿಯರು ಬೇಕಾಗಿದ್ದಾರೆ.
ಆಸಕ್ತಿ ಉಳ್ಳವರು ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ
Ph. No. : 98440-64989

# ಹೆಚ್ಚಳ ಮಾಡಿರುವ ವಿದ್ಯುತ್ ದರ ಇಳಿಸಿ



**20 ಸಾವಿರ ಕೋಟಿ ರೂ ಟೆಂಡರ್ ರದ್ದುಗೊಳಿಸುವವರಿಗೆ ಬೆಲೆ ಏರಿಕೆ ಆದೇಶ ಹಿಂಪಡೆಯಲು ಸಾಧ್ಯವಿಲ್ಲವೇ?: ರೇಣುಕಾಚಾರ್ಯ ಪ್ರಶ್ನೆ**

ದಾವಣಗೆರೆ, ಜು. 12- ಬಿಜೆಪಿ ಯ 20 ಸಾವಿರ ಕೋಟಿ ರೂಪಾಯಿ ಕಾಮಗಾರಿ ಟೆಂಡರ್ ರದ್ದುಗೊಳಿಸಿರುವ ಮುಖ್ಯಮಂತ್ರಿಗಳಿಗೆ ವಿದ್ಯುತ್ ಬೆಲೆ ಏರಿಕೆ ಹಿಂಪಡೆಯಲು ಸಾಧ್ಯವಿಲ್ಲವೇ? ಎಂದು ಹೊನ್ನಾಳಿ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಪ್ರಶ್ನಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯುತ್ ಬೆಲೆಯನ್ನು ಬಿಜೆಪಿ ಸರ್ಕಾರ ಏರಿಸಿದೆ. ನಾವು ಏರಿಸಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿಕೆ ನೀಡುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿನ ಟೆಂಡರ್ ರದ್ದುಗೊಳಿಸಿದಂತೆ ಬಿಜೆಪಿ ಏರಿಸಿದ್ದ ವಿದ್ಯುತ್ ದರ ಏರಿಕೆಯನ್ನೂ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಚುನಾವಣಾ ಪೂರ್ವದಲ್ಲಿ ಸಹಿ ಮಾಡಿದ ಗ್ಯಾರಂಟಿ ಕಾರ್ಡ್ ನೀಡಿ ಮತ ಕೇಳಿದ್ದರು. ಆದರೆ ಈಗ ಹೇಳುತ್ತಿರುವುದೇ ಬೇರೆ. ಯೋಜನೆಗಳ ಅನುಷ್ಠಾನಕ್ಕೆ ಹಲವಾರು ನಿಬಂಧನೆಗಳನ್ನು ಹಾಕಲಾಗುತ್ತಿದೆ ಎಂದು ರೇಣುಕಾಚಾರ್ಯ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಕಳೆದ ತಿಂಗಳಿಗಿಂತ ಈ ಬಾರಿ ಮೂರು ಪಟ್ಟು ವಿದ್ಯುತ್ ಬಿಲ್ ಹೆಚ್ಚಾಗಿದೆ. ಇದರಿಂದ ಸಾಮಾನ್ಯ ಜನರು ಗೊಂದಲಕ್ಕೀಡಾಗಿದ್ದಾರೆ. ಹಳ್ಳಿಗಳಲ್ಲಿ ಜಗಳಗಳಾಗುತ್ತಿವೆ. ಕೂಡಲೇ ದರ ಏರಿಕೆ ಹಿಂಪಡೆದು, 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡ ಬೇಕು ಎಂದ ಅವರು, ಯಾರೂ ವಿದ್ಯುತ್ ಬಿಲ್ ಕಟ್ಟಬಾರದು ಎಂದು ಕರೆ ನೀಡಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದು ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದರು. ಗ್ರಹಚಾರಕ್ಕೆ ಅವರೇ ಅಧಿಕಾರಕ್ಕೆ ಬಂದರು. ಆದರೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಸಂಪನ್ಮೂಲ ಕ್ರೋಢೀಕರಣ ಹೇಗೆ ಮಾಡಬೇಕು ಎಂಬ ಬಗ್ಗೆ ಇಲ್ಲಿಯವರೆಗೂ ಮುಖ್ಯಮಂತ್ರಿಗಳು ತಿಳಿಸಿಲ್ಲ ಎಂದರು.

15 ಕೆ.ಜಿ. ಅಕ್ಕಿ ಕೊಡಿ: ಅನ್ನ ಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ನೀಡುವುದಾಗಿ ಹೇಳಿ ಇದೀಗ, ಕೇಂದ್ರ ಸರ್ಕಾರ ಕೊಡುವ 5 ಕೆ.ಜಿ. ಅಕ್ಕಿಯ ಜೊತೆ ರಾಜ್ಯ ಸರ್ಕಾರ 5 ಕೆ.ಜಿ. ಸೇರಿಸಿ 10 ಕೆಜಿ ಕೊಡುತ್ತಿರುವದು ಸರಿಯಲ್ಲ. ರಾಜ್ಯ ಸರ್ಕಾರವೇ 10 ಕೆಜಿ ಅಕ್ಕಿ ನೀಡಬೇಕು ಎಂದು ರೇ ಣು ಕಾ ಚಾ ರ್ಯ ಒತ್ತಾಯಿಸಿದರು.

ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಕ್ಕೆ ಅನುಕೂಲ ಮಾಡಿ ಕೊಟ್ಟಿರುವುದು ಶ್ಲಾಘನೀಯ. ಆದರೆ ಗ್ರಾಮೀಣ ಪ್ರದೇಶದಲ್ಲಿ ಬಸ್‌ಗಳೇ ಇಲ್ಲ. ಮೊದಲು ಬಸ್ ಸಂಚಾರಕ್ಕೆ ಅನುಕೂಲ ಮಾಡಿ ಕೊಡಬೇಕು. ಮಹಿಳೆಯರಿಗಾಗಿಯೇ ಪ್ರತ್ಯೇಕ ಬಸ್‌ಗಳನ್ನು ಬಿಡಬೇಕು ಎಂದರು.

ಗೃಹ ಲಕ್ಷ್ಮಿ ಯೋಜನೆ ಜಾರಿಗೆ ತಂದು ಅತ್ತೆ-ಸೊಸೆಯರ ಮಧ್ಯೆ ಜಗಳ ಹಚ್ಚಲಾಗಿದೆ. ಸ್ತ್ರೀ ಸಬಲೀಕರಣವಾಗಬೇಕಾದರೆ ಅತ್ತೆ, ಸೊಸೆ ಸೇರಿದಂತೆ, ಕುಟುಂಬದಲ್ಲಿನ ಎಲ್ಲಾ ಮಹಿಳೆಯರಿಗೂ 2 ಸಾವಿರ ರೂಪಾಯಿ ನೀಡಬೇಕು ಎಂದು ಆಗ್ರಹಿಸಿದರು.

ಯುವನಿಧಿ ಯೋಜನೆಯಡಿ ಕಳೆದ 10-15 ವರ್ಷಗಳಿಗೆ ಉದ್ಯೋಗ ಸಿಗದೇ ಇರುವವರಿಗೂ ಯುವ ನಿಧಿ ಕೊಡಬೇಕು. ಯಾವುದೇ ಷರತ್ತುಗಳನ್ನು ಹಾಕಬಾರದು ಎಂದರು.

ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸುವುದಾಗಿ ಮಾತು ಕೊಟ್ಟಿದ್ದರು. ಮಾತಿಗೆ ತಕ್ಕಂತೆ ನಡೆಯಬೇಕು. ಇಲ್ಲದಿದ್ದರೆ ನಾವು ದನಿ ಎತ್ತಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆ ಜಾರಿಗೆ ತರುವುದಾಗಿ ಹೇಳಿ ಇಲ್ಲಿಯವರೆಗೂ ಆ ಬಗ್ಗೆ ಚರ್ಚೆ ನಡೆಸಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮುಖಂಡ ಲೋಕಿಕೆರೆ ನಾಗರಾಜ್, ಪಾಲಿಕೆ ಮಾಜಿ ಸದಸ್ಯರುಗಳಾದ ಶಿವನಗೌಡ ಪಾಟೀಲ್, ಪಿ.ಎಸ್. ಬಸವರಾಜ್ ಸೇರಿದಂತೆ ಎನ್. ರಾಜಶೇಖರ್, ಪಿ.ಸಿ. ಶ್ರೀನಿವಾಸ್, ರಾಜು ವೀರಣ್ಣ, ದಯಾನಂದ, ಶಿವು ಇತರರು ಉಪಸ್ಥಿತರಿದ್ದರು.

## ಲೋಕಸಭಾ ಚುನಾವಣೆಗೆ ಸಿದ್ದೇಶ್ವರ ಅವರೇ ಸ್ಪರ್ಧಿಸಲಿ

ಜಿ.ಎಂ. ಸಿದ್ದೇಶ್ವರ ಅವರು ಹಿರಿಯರು, ಮುಂಬರುವ ಲೋಕಸಭಾ ಚುನಾವಣೆಗೆ ಅವರೇ ಸ್ಪರ್ಧಿಸಲಿ ಎಂಬುದು ಎಲ್ಲರ ಬೇಡಿಕೆಯಾಗಿದೆ ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು. ಸಿದ್ದೇಶ್ವರ ಅವರು ಸ್ಪರ್ದಿಸದೇ ಇದ್ದರೆ ಪಕ್ಷದ ವರಿಷ್ಠರು ಅಭ್ಯರ್ಥಿ ಬಗ್ಗೆ ನಿರ್ಧರಿಸುತ್ತಾರೆ ಎಂದರು.

**ತನಿಖೆಗೆ ಸಿದ್ಧ:** ನನ್ನ ಅವಧಿಯಲ್ಲಿ ಹೊನ್ನಾಳಿ ಕ್ಷೇತ್ರದಲ್ಲಿ ಪಕ್ಷಾತೀತವಾಗಿ ಮನೆಗಳನ್ನು ವಿತರಿಸಲಾಗಿದೆ. ಅವರದ್ದೇ ಸರ್ಕಾರವಿದೆ ಬೇಕಿದ್ದರೆ ತನಿಖೆ ನಡೆಸಲಿ. ತಪ್ಪು ಮಾಡಿದ್ದರೆ ಶಿಕ್ಷೆ ಅನುಭವಿ ಸಲು ಸಿದ್ಧನಿದ್ದೇನೆ ಎಂದು ಶಾಸಕ ಶಾಂತನಗೌಡ ಅವರ ಆರೋಪಕ್ಕೆ ರೇಣುಕಾಚಾರ್ಯ ಉತ್ತರಿಸಿದರು. ಕ್ಷೇತ್ರದಲ್ಲಿನ ಯೋಜನೆಗಳನ್ನು ಸ್ಥಗಿತಗೊಳಿಸದಂತೆ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಮನವಿ ಮಾಡಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

# 21ರಂದು 9ನೇ ವಿಶ್ವ ಯೋಗ ದಿನಾಚರಣೆ



**ನಗರದ ಮೋತಿ ವೀರಪ್ಪ ಹೈಸ್ಕೂಲ್ ಮೈದಾನದಲ್ಲಿ 5 ಸಾವಿರ ಜನರಿಂದ ಯೋಗ ಪ್ರದರ್ಶನ**

ದಾವಣಗೆರೆ, ಜೂ. 12 - ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 21 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ 5 ಸಾವಿರ ಜನರಿಂದ ಯೋಗ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ನಡೆದ ಯೋಗ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಸಿದ್ದತೆಗಳ ಕುರಿತು ಮಾತನಾಡಿದರು.

ಇದೇ ದಿನಾಂಕ 21 ರಂದು 9 ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮಾಡಲಾಗುತ್ತಿದೆ. ಈ ವರ್ಷವೂ ವಸುದೈವ ಕುಟುಂಬ ಕಂ ಧ್ಯೇಯದಡಿ ಪ್ರತಿ ಮನೆಯ ಅಂಗಳದಲ್ಲಿ ಯೋಗ ಎಂಬ ಘೋಷ ವಾಕ್ಯದಡಿ ಯೋಗಾಚರಣೆ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಯೋಗ ದಿನಾಚರಣೆಯನ್ನು ಮೋತಿ ವೀರಪ್ಪ ಹೈಸ್ಕೂಲ್ ಮೈದಾನದಲ್ಲಿ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 5.30 ರಿಂದ 6.30 ರವರೆಗೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಧ್ಯಾನ, 6.30 ರಿಂದ 7 ರವರೆಗೆ ಉದ್ಘಾಟನೆ, 7 ರಿಂದ 7.30 ಸಾಮಾನ್ಯ ಯೋಗ, 7.30 ರಿಂದ 8.30 ರವರೆಗೆ ವೇದಿಕೆ ಕಾರ್ಯಕ್ರಮ, 8.30 ರಿಂದ 9 ರವರೆಗೆ ಉಪಹಾರ ಮತ್ತು 10 ರವರೆಗೆ ಇತರೆ ಚಟುವಟಿಕೆಗಳು ನಡೆಯುತ್ತವೆ.

**ಯೋಗ ಕಲಿತವರ ಅಂಕಿ ಅಂಶ ನೀಡಿ;** ದೈಹಿಕ, ಮಾನಸಿಕ ಆರೋಗ್ಯವನ್ನು ಕಾಪಾಡಲು ಮತ್ತು ಸದಾ ಚಟುವಟಿಕೆಯಿಂದ ಕಾರ್ಯ ನಿರ್ವಹಿಸಲು ಯೋಗ ಪ್ರಮುಖವಾಗಿದ್ದು, ಒತ್ತಡ ಮುಕ್ತ ಜೀವನಕ್ಕೆ ಎಲ್ಲರ ಮನೆಯ ಅಂಗಳದಲ್ಲಿ ಯೋಗ ಸಹಕಾರಿಯಾಗಿದೆ. ಇದನ್ನು ಪರಿಣಾಮಕಾರಿಯಾಗಿ ಜನರಿಗೆ ತಿಳಿಸಲು ಯೋಗ ದಿನಾಚರಣೆ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಯೋಗದ ಮಹತ್ವವನ್ನು ತಿಳಿಸಲಾಗಿದೆ.

ಕಳೆದ 9 ವರ್ಷಗಳಲ್ಲಿ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆ, ಆಯುಷ್ ಇಲಾಖೆ, ವಿವಿಧ ಯೋಗ ಸಂಸ್ಥೆಗಳ ಮೂಲಕ ಯೋಗಾಸನಕ್ಕೆ ತರಬೇತಿ ನೀಡಿದ ವಿವರ ಮತ್ತು ಜಿಲ್ಲೆಯಲ್ಲಿನ ಎಲ್ಲಾ ಜನರಿಗೂ ಯೋಗದ ಪರಿಚಯ ಮಾಡಿಕೊಡುವ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ವಿವರವನ್ನು ಸಂಗ್ರಹಿಸಲು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ರಕ್ಷಣಾಧಿಕಾರಿ ರಾಮಗೊಂಡ ಬಸರಗಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಶಂಕರಗೌಡ ಹಾಗೂ ವಿವಿಧ ಯೋಗ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಜಾಮೀನು ಕೊಡಿಸಿದ ಪತ್ನಿಯನ್ನೇ ಹತ್ಯೆಗೈದ ಪತಿರಾಯ

ಬರೈಲಿ, ಜೂ. 12-ಪತ್ನಿಯ ಶೀಲದ ಬಗ್ಗೆ ಶಂಕಿಸಿದ 40 ವರ್ಷದ ವ್ಯಕ್ತಿಯೋರ್ವ, ತನಗೆ ಜಾಮೀನು ನೀಡಿದ ಪತ್ನಿಯನ್ನೇ ಹತ್ಯೆಗೈದ ಘಟನೆ ಉತ್ತರ ಪ್ರದೇಶದ ಬರೈಲಿಯ ಫತೇಹ್‌ಗಂಜ್‌ನಲ್ಲಿ ನಡೆದಿದೆ.

ಕೃಷ್ಣಪಾಲ್ ಲೋಧಿ ಎಂಬಾತ ಜನನಿಬಿಡ ಮಾರು ಕಟ್ಟೆ ಪ್ರದೇಶದಲ್ಲಿ ಪತ್ನಿ ಪೂಜಾ ಮೇಲೆ ಹಲವು ಬಾರಿ ಗುಂಡು ಹಾರಿಸಿ ಹತ್ಯೆ ಮಾಡಿದ್ದಾನೆ. ಪತ್ನಿಯ ಜೊತೆಗಿದ್ದ 30 ವರ್ಷದ ಮುನ್ನಾ ಎಂಬ ಗೆಳೆಯನ ಮೇಲೆ ಗುಂಡು ಹಾರಿಸಿದ್ದು, ಚಿಕಿತ್ಸೆ ನೀಡಲಾಗುತ್ತಿದೆ.

ಪತ್ನಿ ಮೋಸ ಮಾಡುತ್ತಿದ್ದಾಳೆ ಎಂಬ ಅನುಮಾನದ ಹಿನ್ನೆಲೆಯಲ್ಲಿ ಹತ್ಯೆ ಮಾಡಿರುವುದಾಗಿ ವಿಚಾರಣೆ ವೇಳೆ ಲೋಧಿ ತಿಳಿಸಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

2012ರಲ್ಲಿ ಕೃಷ್ಣಪಾಲ್ ಹಾಗೂ ಪೂಜಾ ಮನೆ ಬಿಟ್ಟು ಮದುವೆ ಮಾಡಿಕೊಂಡಿದ್ದರು. ಕೃಷ್ಣಪಾಲ್ ಜೊತೆ ಮದುವೆ ಮಾಡಿಕೊಳ್ಳುವುದು ಪೂಜಾ ಕುಟುಂಬದವರಿಗೆ ಇಷ್ಟವಿರಲಿಲ್ಲ. ಕೃಷ್ಣಪಾಲ್ ಈ ಹಿಂದೆ ಹತ್ಯೆ ಯತ್ನದ ಪ್ರಕರಣದಲ್ಲಿ ಸಿಲುಕಿ ಜೈಲಿನಲ್ಲಿದ್ದ. ಹದಿನೈದು ದಿನಗಳ ಹಿಂದೆ ಪತ್ನಿ ಆತನನ್ನು ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದಿದ್ದಾಗಿ ಪೊಲೀಸರು ಹೇಳಿದ್ದಾರೆ.

# ಎಸ್.ಎಸ್.ಕೇರ್ ಟ್ರಸ್ಟ್‌ನಿಂದ ಗರ್ಭಿಣಿ ಸ್ತ್ರೀಯರಿಗೆ ಉಚಿತ ಚಿಕಿತ್ಸೆ

**ಸೌಲಭ್ಯದ ಸದುಪಯೋಗಕ್ಕೆ ಪ್ರಭಾ ಮಲ್ಲಿಕಾರ್ಜುನ್ ಕರೆ**



ದಾವಣಗೆರೆ,ಜೂ.12- ತಾಲ್ಲೂಕಿನ ಅರಸಾಪುರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ರಕ್ತ ಹೀನತೆ ಚಿಕಿತ್ಸೆಯನ್ನು ಪಡೆದ ಮಕ್ಕಳಿಗೆ ಹಾಗೂ ಸಹಕರಿಸಿದ ಅಂಗನವಾಡಿ ಶಿಕ್ಷಕರು ಮತ್ತು ಆಶಾ ಕಾರ್ಯಕರ್ತೆಯರಿಗೆ ಪ್ರಶಂಸನಾ ಪತ್ರವನ್ನು ವಿತರಿಸಲಾಯಿತು.

ಪತ್ರವನ್ನು ವಿತರಿಸಿದ ಟ್ರಸ್ಟ್‌ನ ಆಜೀವ ಟ್ರಸ್ಟಿ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಟ್ರಸ್ಟ್ ವತಿಯಿಂದ ಗರ್ಭಿಣಿ ಸ್ತ್ರೀಯರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಉಚಿತವಾಗಿ ಡಿಲೆವರಿ ಸೌಲಭ್ಯಗಳನ್ನೂ ಸಹ ನೀಡುತ್ತಿದ್ದು, ಸದುಪಯೋಗಪಡೆದುಕೊಳ್ಳುವಂತೆ ಕರೆ ನೀಡಿದರು.

ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸ್ವರ್ಣಜಾ ಅಂಜಿಬಾಬು ಮಾತನಾಡಿ ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ತುಂಬಾ ಒಳ್ಳೆಯ ಕಾರ್ಯಕ್ರಮಗಳು ನಡೆಯುತ್ತಿವೆ, ಸಾರ್ವಜನಿಕರು ಅದರ ಪ್ರಯೋಜನವನ್ನು ಪಡೆದು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದು ಹೇಳಿದರು.

ಸದರಿ ಸಮಾರಂಭದಲ್ಲಿ ಸಮುದಾಯ ವಿಭಾಗದ ಪ್ರಾಧ್ಯಾಪಕರಾದ ಡಾ. ಶೀಲಾ ಪಿ. ಹಾವೇರಿ ಮತ್ತು ಮಕ್ಕಳ ತಜ್ಞರಾದ ಡಾ. ಮಾಳವಿಕ 'ರಕ್ತ ಹೀನತೆ ಮತ್ತು ಅಪೌಷ್ಠಿಕತೆ' ಕುರಿತು ಮಾಹಿತಿ ನೀಡಿದರು.

ಎಸ್.ಎಸ್. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಬಿ. ಎಸ್.ಪ್ರಸಾದ್, ವೈದ್ಯಕೀಯ ನಿರ್ದೇಶಕ ಡಾ. ಅರುಣ್‌ಕುಮಾರ್ ಅಜ್ಜಪ್ಪ, ಸಮುದಾಯ ವಿಭಾಗದ ಮುಖ್ಯಸ್ಥ ಡಾ.ಅಶ್ವಿನ್ ಕುಮಾರ್, ಸಮುದಾಯ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ರಂಗನಾಥ ಎಸ್. ಸಿ. ಮತ್ತು ಡಾ. ಮನು ಎ. ಎಸ್., ಡಾ. ಶಾಂತಲಾ ಅರುಣ್ ಕುಮಾರ್, ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ರತ್ನಮ್ಮ , ತಾಲ್ಲೂಕ್ ಆರೋಗ್ಯಾಧಿಕಾರಿ ಡಾ. ದೇವರಾಜ್ ಪಟಿಗೆ, ಶಿಶು ಅಭಿವೃಧಿ ಯೋಜನಾಧಿಕಾರಿ ಪ್ರಿಯದರ್ಶಿನಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ರುದ್ರೇಶ್, ಸಮುದಾಯ ವಿಭಾಗದ ಸಾಮಾಜಿಕ ಕಾರ್ಯಕರ್ತರಾದ ನಾಗರಾಜ ಟಿ.ಜಿ ಮತ್ತು ಅಶೋಕ್ ಕುಮಾರ್ ಎಂ.ಎಸ್. ಮತ್ತಿತರರು ಉಪಸ್ಥಿತರಿದ್ದರು.

# ಪಡಿತರ ಕಾರ್ಡುದಾರರಿಗೆ ಉಚಿತ ಆಹಾರಧಾನ್ಯ

ದಾವಣಗೆರೆ, ಜೂ. 12 - ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ವಿವಿಧ ವರ್ಗದ ಪಡಿತರ ಚೀಟಿದಾರರಿಗೆ ಜೂನ್ ಮಾಹೆಗೆ ಅನ್ವಯವಾಗುವಂತೆ ಉಚಿತ ಪಡಿತರ ಧಾನ್ಯ ಪಡೆಯಲು ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡಲಾಗಿದೆ.

ಅಂತ್ಯೋದಯ ಪಡಿತರ ಚೀಟಿದಾರರಿಗೆ 21 ಕೆ.ಜಿ ಅಕ್ಕಿ ಮತ್ತು ಪ್ರತಿ ಕಾರ್ಡಿಗೆ 14 ಕೆ.ಜಿ ರಾಗಿ, ಆದ್ಯತಾ ಪಡಿತರ ಚೀಟಿದಾರರಿಗೆ 4 ಕೆ.ಜಿ ಅಕ್ಕಿ ಮತ್ತು ಪ್ರತಿ ಸದಸ್ಯರಿಗೆ 2 ಕೆ.ಜಿ ರಾಗಿ ಉಚಿತವಾಗಿ ವಿತರಿಸಲಾಗುತ್ತದೆ. ಹಾಗೂ ಪ್ರತಿ ಕೆ.ಜಿ ಗೆ ರೂ 15 ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್ ಏಕಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ, ಎರಡು ಮತ್ತು ಹೆಚ್ಚಿನ ಸದಸ್ಯ ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ದಾವಣಗೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಪಡಿತರ ಚೀಟಿಗಳಲ್ಲಿನ ಸದಸ್ಯರ ಇ ಕೆವೈಸಿ ಬಾಕಿ ಇದ್ದು, ರಾಜ್ಯದ ಯಾವುದೇ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪಡಿತರ ಫಲಾನುಭವಿಗಳು (ಸದಸ್ಯರ) ಇಕೆವೈಸಿ ಕಾರ್ಯವನ್ನು ತುರ್ತಾಗಿ ಪೂರ್ಣಗೊಳಿಸಬೇಕು ಎಂದು ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಡಾ.ಎಂ.ಬಿ. ಅಶ್ವತ್ಥ್ ತಿಳಿಸಿದ್ದಾರೆ.

# ಬುಕ್ ಆಫ್ ರೆಕಾರ್ಡ್ಸ್‌ಗೆ ಆಧ್ಯಾ ಕಾಸಲ್



ದಾವಣಗೆರೆ ಜೂ. 12- ನಗರದ ಎಸ್. ನಿಜಲಿಂಗಪ್ಪ ಬಡಾವಣೆ ನಿವಾಸಿ ಕಾಸಲ್ ರತನ್ ಹಾಗೂ ಆಶಾ ಆರ್. ಕಾಸಲ್ ಇವರ ಪುತ್ರಿ 5 ವರ್ಷದ ಬಾಲಕಿ ಆಧ್ಯಾ, ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆಯಾಗಿದ್ದಾರೆ.

5 ನಿಮಿಷ 20 ಸೆಕೆಂಡಿಗೆ 210 ಜನರಲ್ ನಾಲೆಡ್ಜ್ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಮತ್ತೊಂದರಲ್ಲಿ 1 ನಿಮಿಷ 10 ಸೆಂಕೆಂಡಿಗೆ 51 ಇನ್ವೆನ್ಷನ್ ಪ್ರಶ್ನೆಗಳಿಗೆ ಉತ್ತರಿಸಿ ದಾಖಲೆ ಮಾಡಿದ್ದಾರೆ. ಸಂಸ್ಥೆಯು ಆಧ್ಯಾಗೆ ಗುರುತಿನ ಚೀಟಿ, ಮೆಡಲ್ ಮತ್ತು ಪ್ರಮಾಣ ಪತ್ರ ನೀಡಿದೆ.

## ಯುಪಿಎಸ್ಸಿ ಪರೀಕ್ಷೆ : ಅರ್ಹತೆ ಪಡೆದ 14,264 ಅಭ್ಯರ್ಥಿಗಳು

ನವದೆಹಲಿ, ಜೂ. 12 – ನಾಗರಿಕ ಸೇವಾ ಪರೀಕ್ಷೆಗಳ ಪ್ರಾಥಮಿಕ ಹಂತದಲ್ಲಿ 14,624 ಅಭ್ಯರ್ಥಿಗಳು ಅರ್ಹತೆ ಪಡೆದುಕೊಂಡಿದ್ದಾರೆ. ಕೇಂದ್ರ ಲೋಕ ಸೇವಾ ಆಯೋಗ ಈ ಪರೀಕ್ಷೆ ನಡೆಸಿತ್ತು.

3 ಹಂತಗಳಲ್ಲಿ ಯು.ಪಿ.ಎಸ್.ಸಿ. ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಪ್ರಾಥಮಿಕ, ಮುಖ್ಯ ಹಂತಗಳ ನಂತರ ಸಂದರ್ಶನ ನಡೆಸಲಾಗುತ್ತದೆ. ನಂತರ ಐ.ಎ.ಎಸ್., ಐ.ಎಫ್.ಎಸ್. ಹಾಗೂ ಐ.ಪಿ.ಎಸ್. ಇತ್ಯಾದಿ ಸೇವೆಗಳಿಗೆ ಆಯ್ಕೆ ಮಾಡಲಾಗುತ್ತದೆ.

2023ರ ಪ್ರಾಥಮಿಕ ಪರೀಕ್ಷೆಗಳನ್ನು ಮೇ 28ರಂದು ಕೈಗೊಳ್ಳಲಾಗಿತ್ತು. ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಯು.ಪಿ.ಎಸ್.ಸಿ. ವೆಬ್ ತಾಣದಲ್ಲಿ ಪ್ರಕಟಿಸಲಾಗಿದೆ.


# 25ನೇ ವರ್ಷದ ಪುಣ್ಯಸ್ಮರಣೆ



## ದಿ॥ ಬೇತೂರು ಶಾಂತಪ್ಪನವರು

ಜನನ : 26-08-1928 ಮರಣ : 13-06-1998

" ನಮ್ಮ ಬದುಕಿಗೆ ಕ್ರಿಯಾಶೀಲತೆಯನ್ನು ತುಂಬಿ, ನಿಸರ್ಗದ ಮಡಿಲಲ್ಲಿ ನಮ್ಮೆಲ್ಲರನ್ನು ಬಿಟ್ಟು, ಸ್ವರ್ಗ ಸೇರಿದ ನಿಮ್ಮ ಆತ್ಮ ಮತ್ತೊಮ್ಮೆ ಭೂಮಿತಾಯಿಯ ಮೇಲೆ ಪ್ರತಿಬಿಂಬಿಸಲಿ"
ಸಾರ್ಥಕ ಬದುಕಿನ ಪಯಣದಲ್ಲಿ ನಿಮ್ಮ ಶ್ರಮ ಸಮುದ್ರ್ರದ ಅಲೆಗಳಂತೆ ಸದಾ ಹಸನ್ಮುಖಿಯಾಗಿ ರಾರಾಜಿಸಲಿ, ನಮ್ಮೆಲ್ಲರ ಬದುಕಿಗೆ ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮ ಮೇಲಿರಲಿ.

ಇವರು ನಮ್ಮನ್ನಗಲಿ ಇಂದಿಗೆ ಇಪ್ಪತ್ತೈದು ವರ್ಷಗಳಾದವು
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ

ಧರ್ಮಪತ್ನಿ ಶ್ರೀಮತಿ ಸರಸ್ವತಮ್ಮ ಶಾಂತಪ್ಪ ಬೇತೂರು,
ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು

ಹೆಚ್. ಆರ್. ಬೇತೂರ್, ವಿಜಯಲಕ್ಷ್ಮಿ ರಸ್ತೆ, ಹೆಚ್. ಆರ್. ಬೇತೂರ್ ಟ್ರೇಡರ್ಸ್, ಮಂಡಿಪೇಟೆ
ಬೇತೂರ್ ಕಮ್ಯೂನಿಕೇಷನ್ಸ್ , ಪಿ.ಜೆ. ಬಡಾವಣೆ, ಬೇತೂರ್ ಎಂಟರ್‌ಪ್ರೈಸಸ್, ನಿಜಲಿಂಗಪ್ಪ ಬಡಾವಣೆ,
ಬೇತೂರ್ ಕುಟುಂಬವರ್ಗ ಹಾಗೂ ಬಂಧು-ಮಿತ್ರರು


## ಚಿತ್ರದುರ್ಗ ಬಳಿ ಅಪಘಾತ- ಮೂವರ ಸಾವು

ಚಿತ್ರದುರ್ಗ: ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಕಾರು ಮತ್ತು ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂರು ತಿಂಗಳ ಶಿಶು ಸೇರಿ ಮೂವರು ಮೃತಪಟ್ಟ ಘಟನೆ ತಾಲ್ಲೂಕಿನ ವಿಜಯಪುರ ಗ್ರಾಮದ ಸಮೀಪ ನಡೆದಿದೆ.

ಬೆಂಗಳೂರಿನ ಎಚ್.ಎಸ್. ಆರ್ ಬಡಾವಣೆ ನಿವಾಸಿಗಳಾದ ಜಾಕೀರ್ ಅಹಮ್ಮದ್ (60), ತಬಸುಮ್ (28) ಹಾಗೂ ಮೂರು ತಿಂಗಳ ಹಯಾತ್ ಫಾತಿಮಾ ಮೃತಪಟ್ಟವರು. ನಯಾಜ್ (22), ಇಮ್ರಾನ್ ಖಾನ್ (32), ತಬ್ರೀಜ್ ಅಹಮ್ಮದ್ (27), ಸಬಾ (26) ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗೋವಾದಿಂದ ಬೆಂಗಳೂರಿಗೆ ಹೊರಟಿದ್ದ ಕಾರು, ಚಾಲಕನ ನಿಯಂತ್ರಣ ಕಳೆದುಕೊಂಡು ಮುಂದೆ ಸಾಗುತ್ತಿದ್ದ ಲಾರಿಗೆ ಅಪ್ಪಳಿಸಿದೆ. ಸ್ಥಳದಲ್ಲಿಯೇ ಮೂವರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ತಿಳಿಸಿದ್ದಾರೆ.

# ಅತ್ಯಂತ ದೀರ್ಘಕಾಲದ ದಾಖಲೆ ಬರೆಯಲಿರುವ ಚಂಡಮಾರುತ

ನವದೆಹಲಿ, ಜೂ. 12 – ಗುಜರಾತ್ ಕರಾವಳಿಗೆ ಅಪ್ಪಳಿಸಲಿರುವ ಬಿಪರ್‌ಜಾಯ್ ಚಂಡಮಾರುತವು ಅರಬ್ಬೀ ಸಮುದ್ರದಲ್ಲಿ ಅತ್ಯಂತ ದೀರ್ಘ ಕಾಲ ಕಾಣಿಸಿಕೊಂಡ ದಾಖಲೆ ಬರೆಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಜೂನ್ 1965ರ ನಂತರ ಮೂರನೇ ಬಾರಿ ಗುಜರಾತ್‌ಗೆ ಚಂಡಮಾರುತವೊಂದು ಅಪ್ಪಳಿಸಲಿದೆ. ಜೂನ್ 15ರಂದು ಚಂಡಮಾರುತ ರಾಜ್ಯವನ್ನು ದಾಟಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಜೂನ್ 6ರ ಬೆಳಿಗ್ಗೆ 5.30ಕ್ಕೆ ಅರಬ್ಬೀ ಸಮುದ್ರದಲ್ಲಿ ಬಿಪರ್‌ಜಾಯ್ ಚಂಡಮಾರುತ ಕಾಣಿಸಿಕೊಂಡಿತ್ತು. ಚಂಡಮಾರುತ ಕಾಣಿಸಿಕೊಂಡು ಈಗಾಗಲೇ ಎಂಟು ದಿನಗಳು ಉರುಳಿವೆ. 2019ರಲ್ಲಿ ಅರಬ್ಬೀ ಸಮುದ್ರದಲ್ಲಿ ಕಾಣಿಸಿಕೊಂಡ ಕ್ಯಾರ್ ಚಂಡಮಾರುತ ಒಂಭತ್ತು ದಿನ 15 ಗಂಟೆಗಳ ಕಾಲ ಉಳಿದುಕೊಂಡಿತ್ತು. 2018ರ ಗಜ ಚಂಡಮಾರುತ 9 ದಿನ ಹಾಗೂ 15 ಗಂಟೆಗಳ ಕಾಲ ಇತ್ತು.

ಅರಬ್ಬೀ ಸಮುದ್ರದಲ್ಲಿ ತಾಪಮಾನ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬಿಪರ್‌ಜಾಯ್ ಚಂಡಮಾರುತ ಹೆಚ್ಚು ಕಾಲ ಸಮುದ್ರದಲ್ಲಿದೆ ಹಾಗೂ ನಿರಂತರವಾಗಿ ತನ್ನ ಬಲವನ್ನು ಹೆಚ್ಚಿಸಿಕೊಳ್ಳುತ್ತಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಕೊವಿನ್ ವೆಬ್ ತಾಣದ ರಕ್ಷಣೆ ಉಲ್ಲಂಘನೆಯಾಗಿಲ್ಲ

ನವದೆಹಲಿ, ಜೂ. 12 – ಕೊವಿನ್ ವೆಬ್ ಪೋರ್ಟಲ್ ಸಂಪೂರ್ಣ ಸುರಕ್ಷಿತವಾಗಿದೆ ಹಾಗೂ ಖಾಸಗಿತನದ ರಕ್ಷಣೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ವೆಬ್ ತಾಣ ಹ್ಯಾಕ್ ಮಾಡಲಾಗಿದೆ ಎಂಬ ವರದಿ ಕುಚೇಷ್ಟೆಯದ್ದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಸಚಿವಾಲಯ, ಈಗಿರುವ ರಕ್ಷಣಾ ಕ್ರಮಗಳ ಪರಿಶೀಲನೆಗಾಗಿ ಆಂತರಿಕ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಹೇಳಿದೆ.

ಕೊವಿನ್ ಮಾಹಿತಿ ಉಲ್ಲಂಘಿಸಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಲಾಗಿದೆ.

ತಕ್ಷಣವೇ ಸಿ.ಇ.ಆರ್.ಟಿ. - ಐ.ಎನ್. ತಂಡ ಪರಿಶೀಲಿಸಿದೆ. ಕೊವಿನ್ ಆಪ್ ಇಲ್ಲವೇ ಮಾಹಿತಿಯಲ್ಲಿ ಯಾವುದೇ ಉಲ್ಲಂಘನೆಯಾಗಿಲ್ಲ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ಮಾಹಿತಿಯ ಉಲ್ಲಂಘನೆಯಾಗಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.